


PRATHAM BOOKS

# ವಾರ್ಷಿಕ ವರದಿ

2022-2023

## ಬದಲಾವಣೆಯ ಪ್ರತಿನಿಧಿಯಾಗಿ —
## ಪುಸ್ತಕದಿಂದ ಪುಸ್ತಕಕ್ಕೆ,
## ಮಗುವಿನಿಂದ ಮಗುವಿಗೆ.

# ಮ್ಯಾನೇಜ್‌ಮೆಂಟ್ ವರದಿ

**9.3 ದಶಲಕ್ಷ ಪುಸ್ತಕಗಳು ಹಾಗೂ ಸ್ಟೋರಿ ಕಾರ್ಡುಗಳು**

**50,000ಕ್ಕೂ ಹೆಚ್ಚು ಡಿಜಿಟಲ್ ಪುಸ್ತಕಗಳು**

**332 ಭಾಷೆಗಳು (215 ಅಳಿವಿನಂಚಿನಲ್ಲಿರುವ)**

**34 ಮಿಲಿಯನ್ ರೀಡ್ಸ್**

## ಪುಸ್ತಕಗಳು ಬದಲಾವಣೆಯ ಹರಿಕಾರರು

***"ಪುಸ್ತಕಗಳೆಂದರೆ ಎಲ್ಲಿಗೆ ಬೇಕಾದರೂ ಒಯ್ಯಬಲ್ಲ ವಿಶಿಷ್ಟ ಜಾದೂ." - ಸ್ಟಿಫನ್ ಕಿಂಗ್***

ಮಾತೃಭಾಷೆಗಳಲ್ಲಿ ಪುಸ್ತಕಗಳ ತತ್ವಾರವನ್ನು ಮನಗಂಡು 2004ರಲ್ಲಿ ಹುಟ್ಟಿಕೊಂಡ ಸಂಸ್ಥೆ 'ಪ್ರಥಮ್ ಬುಕ್ಸ್' 'ಪ್ರತಿ ಮಗುವಿನ ಕೈಯಲ್ಲಿ ಪುಸ್ತಕ' ಎಂಬ ಧ್ಯೇಯವಾಕ್ಯ ಹೊಂದಿದೆ. ನಮ್ಮ ಸಂಸ್ಥೆಯ ಇತಿಹಾಸದಲ್ಲೇ ಮೊದಲ ಬಾರಿಗೆ ಕಳೆದ ವರ್ಷ ದೇಶಾದ್ಯಂತ ಒಟ್ಟು 9.3 ದಶಲಕ್ಷ ಪುಸ್ತಕಗಳನ್ನು ತಲುಪಿಸಿದ್ದೇವೆ. ಅಷ್ಟೇ ಅಲ್ಲದೇ, ನಮ್ಮ ಡಿಜಿಟಲ್ ಉಚಿತ ವೇದಿಕೆ ಸ್ಟೋರಿವೀವರ್‌ನಲ್ಲಿ 332 ಭಾಷೆಗಳಲ್ಲಿ 50,000ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದೇವೆ. ಈ ಪೈಕಿ ಸುಮಾರು 215ಕ್ಕೂ ಹೆಚ್ಚು ಭಾಷೆಗಳು ಅಳಿವಿನಂಚಿನಲ್ಲಿವೆ. ಒಟ್ಟಾರೆಯಾಗಿ ಕಳೆದ ವರ್ಷ ವೇದಿಕೆಗೆ ಸೇರ್ಪಡೆಯಾಗಿರುವ ಅಳಿವಿನಂಚಿನ ಭಾಷೆಗಳ ಪುಸ್ತಕಗಳ ಪ್ರಮಾಣ ಈ ಮೂಲಕ ಶೇ.88ಕ್ಕೇರಿದೆ. ಅವುಗಳಲ್ಲಿ ಕೆಲವನ್ನು ಹೆಸರಿಸುವುದಾದರೆ ಬುರಾ, ಎರ್ಜ್ಯಾ, ನಾನೈ, ರುಸಿನ್, ಲೆಪ್ಚಾ ಇತ್ಯಾದಿ.

ನಮ್ಮ ಕಾರ್ಯಕ್ಷೇತ್ರದ ಮೂರು ಪ್ರಮುಖ ಆಧಾರ ಸ್ತಂಭಗಳೆಂದರೆ ಬರೆವಣಿಗೆ, ತಲುಪುವಿಕೆ, ಬದಲಾವಣೆ. ಮಾತೃಭಾಷೆಯಲ್ಲಿ ಪುಸ್ತಕಗಳ ರಚನೆ ನಮ್ಮ ಕೆಲಸದ ಕೇಂದ್ರ ಭಾಗವಾಗಿದ್ದು, ಈವರೆಗೆ 5,000ಕ್ಕೂ ಹೆಚ್ಚು ಮಕ್ಕಳ ಪುಸ್ತಕಗಳನ್ನು ಪ್ರಕಟಿಸಿದ್ದೇವೆ. ಇಂತಹ ಅತ್ಯದ್ಭುತ ರಚನೆಕಾರರ ಸಮೂಹದ ಜೊತೆ ಪಾಲುದಾರರಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿದ್ದಕ್ಕೆ ನಾವು ಖಂಡಿತವಾಗಿ ಆಭಾರಿಗಳು. ವೈವಿಧ್ಯತೆ, ಒಳಗೊಳ್ಳುವಿಕೆಯ ಪುಸ್ತಕಗಳು, ಸ್ವಂತಿಕೆ, ಲಿಂಗ ಸಮಾನತೆ, ಹವಾಮಾನ ಬದಲಾವಣೆ, ಬದಲಾವಣೆಯ ಹರಿಕಾರರ ಬಗ್ಗೆ, ಹಾಗೆಯೇ ಸಾಮಾಜಿಕ-ಭಾವನಾತ್ಮಕ ಕಲಿಕೆ ಸೇರಿದಂತೆ ಹಲವು ವಿಷಯಗಳಲ್ಲಿ ಪುಸ್ತಕಗಳನ್ನು ತಂದಿದ್ದೇವೆ. ಲವಲವಿಕೆ ಮೂಡಿಸುವ, ಪ್ರೇರಣೆ ನೀಡಬಲ್ಲ ಹಾಗೂ ಯೋಚನಾ ಶಕ್ತಿಗೆ ಇಂಬು ಕೊಡಬಲ್ಲ ವೈವಿಧ್ಯಮಯ ವ್ಯಕ್ತಿತ್ವಗಳ ಕುರಿತಾದ ಪುಸ್ತಕಗಳು, ಅವರ ವಿಭಿನ್ನ ಪ್ರಪಂಚಗಳು, ಅನುಭವ, ನಡೆದು ಬಂದ ದಾರಿಗಳು ಈ ಕತೆಗಳಲ್ಲಿ ಅಡಕಗೊಂಡಿವೆ. ನಮ್ಮ ಪುಸ್ತಕಗಳು; ದೇಶದಲ್ಲಿ ಮಾತ್ರವಲ್ಲದೇ, ವಿಶ್ವದಾದ್ಯಂತ ತರಗತಿಗಳಲ್ಲಿ, ಸಾಮೂಹಿಕ ಗ್ರಂಥಾಲಯಗಳಲ್ಲಿ, ಮನೆಗಳಲ್ಲಿ ಮಕ್ಕಳ ಕೈ ಸೇರಿ ಎಲ್ಲೆಲ್ಲೂ ತಮ್ಮ ಸ್ಥಾನವನ್ನು ಕಂಡುಕೊಳ್ಳುತ್ತಲೇ ಇವೆ. ಇಲ್ಲಿಯವರೆಗೆ ಮತ್ತು ಕಳೆದ ವರ್ಷ ಸಂದ ಹಲವು ಪ್ರಶಸ್ತಿ, ಪುರಸ್ಕಾರಗಳು ನಮ್ಮ ಪುಸ್ತಕಗಳಿಗೆ, ಅವುಗಳ ಮೌಲ್ಯಕ್ಕೆ ಸಾಕ್ಷಿಯಾಗಿವೆ.

ತಲುಪುವಿಕೆ ಎಂದರೆ ಬಹುಮುಖ್ಯವಾಗಿ ನಮ್ಮ ಸಂತಸ ಬೀರುವ ಪುಸ್ತಕಗಳು ಅಲ್ಪಸಂಖ್ಯಾತ ಸಮುದಾಯದ ಮಕ್ಕಳಿಂದ ಮೊದಲುಗೊಂಡು, ಕಲಿಸುವ ಎಲ್ಲರಿಗೂ ಎಲ್ಲ ಕಡೆ ಲಭ್ಯ ಇವೆಯೇ ಎಂಬುದನ್ನು ಖಾತ್ರಿ ಪಡಿಸಿಕೊಳ್ಳುವುದೇ ಆಗಿತ್ತು. ನಮ್ಮ ಪುಸ್ತಕಗಳು ಪ್ರಿಂಟ್, ಡಿಜಿಟಲ್, ಆಡಿಯೋ ಮಾದರಿಯಲ್ಲಿ ಬೇರೆ ಬೇರೆ ಮಾರ್ಗಗಳಲ್ಲಿ ನಮ್ಮ ಮೂಲಕ ನೇರವಾಗಿ ಮಾತ್ರವಲ್ಲದೇ ನಮ್ಮ ಹಲವು ಸಹಭಾಗಿಗಳ ಮೂಲಕವೂ ಲಭ್ಯವಿವೆ. ಕಳೆದ ವರ್ಷದಲ್ಲಿ, ಛತ್ತೀಸ್‌ಘಡ, ಗೋವಾ, ಕರ್ನಾಟಕ, ಮಹಾರಾಷ್ಟ್ರ ಸರ್ಕಾರಗಳೊಂದಿಗೆ ಸಹಭಾಗಿಗಳಾಗುವ ಮೂಲಕ, ಕಡಿಮೆ ಸಂಪನ್ಮೂಲಗಳು ಅಥವಾ ಸಂಪನ್ಮೂಲಗಳೇ ಇಲ್ಲದ ಮಕ್ಕಳಿಗೆ ಪ್ರಿಂಟ್, ಡಿಜಿಟಲ್, ಆಡಿಯೋ ಪುಸ್ತಕಗಳನ್ನು ತಲುಪಿಸಿದ್ದೇವೆ.

ನಿಸ್ಸಂದೇಹವಾಗಿ ವಿಶ್ವದಲ್ಲೇ ಮಕ್ಕಳ ಪುಸ್ತಕಗಳ ಅತೀ ದೊಡ್ಡ ಸಂಗ್ರಹವೆಂದು ಬೆನ್ನು ತಟ್ಟಿಕೊಳ್ಳಬಹುದಾದ, ಪ್ರಶಸ್ತಿ ವಿಜೇತ ಡಿಜಿಟಲ್ ವೇದಿಕೆ ನಮ್ಮ ಸ್ಟೋರಿವೀವರ್. ಇದನ್ನು 10 ನಿರ್ದಿಷ್ಟ ಭಾಷೆಗಳ ಇಂಟರ್ ಫೇಸ್‌ನಲ್ಲಿ ಆನ್‌ಲೈನ್, ಆಫ್‌ಲೈನ್‌ನಲ್ಲಿ ನೋಡಬಹುದು. ಈ ವರ್ಷ ದೇಶಾದ್ಯಂತ ಶಿಕ್ಷಕವರ್ಗ, ಪೋಷಕರು, ಮಕ್ಕಳು ಅಲ್ಲದೇ 150 ದೇಶಗಳಲ್ಲಿನ ಓದುಗರು ತಮ್ಮ ಮಾತೃಭಾಷೆಯಲ್ಲಿ ನಮ್ಮ ಕತೆಗಳನ್ನು ಓದಿದ್ದಾರೆ. ಇಂಟರ್‌ನೆಟ್ ಸಂಪರ್ಕ ಇಲ್ಲದವರಿಗಾಗಿ, ನಮ್ಮ ಉಚಿತ ಚಾನಲ್ - 'ಮಿಸ್ಡ್ ಕಾಲ್ ಕೊಡಿ, ಕತೆ ಕೇಳಿ'ನಲ್ಲಿ ಆಡಿಯೋ ಪುಸ್ತಕಗಳು ಕನ್ನಡ, ಹಿಂದಿ, ಮರಾಠಿ, ಗುಜರಾತಿ, ಉರ್ದು, ಇಂಗ್ಲಿಷಿನಲ್ಲಿ ಲಭ್ಯವಿವೆ.

ನಮ್ಮ ಪಾಲುದಾರಿಕೆಯ ಕಾರ್ಯಕ್ರಮಗಳು ನಮ್ಮ ಪುಸ್ತಕಗಳ ಮೂಲಕ ಓದು-ತಿಳಿವಳಿಕೆಯ ಮೇಲೆ ಪರಿಣಾಮ ಬೀರುವುದು, ಬದಲಾವಣೆ ತರುವುದನ್ನು ಒಳಗೊಂಡಿರುತ್ತವೆ.

ಓದುಗರಿಗೆ ಪುಸ್ತಕಗಳು ಬದಲಾವಣೆಯ ಪ್ರಮುಖ ಹರಿಕಾರರಂತೆ. ವಿದ್ವಾಂಸ ರುಡಿನ್ ಸಿಮ್ಸ್ ಬಿಷಪ್ ಹೇಳುವಂತೆ, ಓದುಗರಿಗೆ ಪುಸ್ತಕಗಳು ಕಿಟಕಿಗಳಂತೆ, ಸರಿಸುವ ಗಾಜಿನ ಬಾಗಿಲುಗಳಂತೆ, ವ್ಯಕ್ತಿತ್ವಗಳಿಗೆ ಹಿಡಿದ ಕನ್ನಡಿಯಂತೆ. ಕಿಟಕಿಗಳಂತೆಯೇ ಪುಸ್ತಕಗಳು ಓದುಗರಿಗೆ ಜನರು, ಸ್ಥಳ, ಅನುಭವಗಳ ಬಗ್ಗೆ ಭಿನ್ನ ದೃಷ್ಟಿಕೋನಗಳನ್ನು ನೀಡುತ್ತವೆ. ಸರಿಸುವ ಗಾಜಿನ ಬಾಗಿಲುಗಳಂತೆ ಪುಸ್ತಕಗಳು ಓದುಗರಿಗೆ ಹೊಸ ಜಗತ್ತು, ವಾಸ್ತವವನ್ನು ಪ್ರವೇಶಿಸುವ ಅನುಭವವನ್ನು ನೀಡುತ್ತವೆ. ಪುಸ್ತಕಗಳು ಓದುಗರಿಗೆ ಕನ್ನಡಿಯಂತೆ, ತಮ್ಮದೇ ಬದುಕಿನ ಪರಿಸ್ಥಿತಿಗಳು ಹಾಗೂ ಪಾತ್ರಗಳನ್ನು ಕತೆಗಳ ಮೂಲಕ ಎದುರಿಟ್ಟು ಇನ್ನಷ್ಟು ಸ್ಪಷ್ಟವಾಗಿ ಅರ್ಥ ಮಾಡಿಸಲು ಸಹಾಯ ಮಾಡುತ್ತವೆ.

ನಮ್ಮ ತೆರೆದ ಪುಸ್ತಕಗಳು, ತೆರೆದ ಬಾಗಿಲುಗಳು, ತೆರೆದ ಮನಸ್ಸುಗಳು: 3ರಿಂದ 5ನೇ ತರಗತಿಯಂತಹ ಪ್ರಾಥಮಿಕ ಶಾಲಾ ಮಕ್ಕಳಲ್ಲಿ ಕತೆಗಳ ಮೂಲಕ ಲಿಂಗ ಸಮಾನತೆ ಬೆಂಬಲದ ಬಗ್ಗೆ ಸೂಚಿತ ಕಾರ್ಯಕ್ರಮಗಳು ನಡೆದವು. ವಯೋಮಾನಕ್ಕೆ ಅನುಗುಣವಾಗಿ ಶ್ರೇಣೀಕೃತಗೊಂಡಿರುವ ನಮ್ಮ ನಾಲ್ಕು ಹಂತದ ಪುಸ್ತಕಗಳಲ್ಲಿ ಲಿಂಗ ಸಮಾನತೆ ಸಾರುವ ಕತೆಗಳನ್ನು ಪಟ್ಟಿ ಮಾಡಿದ್ದೆವು. ಇವುಗಳನ್ನು ಆಧರಿಸಿ ನಡೆದ ಸವಿವರ ಸೆಷನ್ನುಗಳು; ವೈವಿಧ್ಯತೆ, ಲಿಂಗಾಧರಿತ ಪಾತ್ರಗಳನ್ನೊಳಗೊಂಡ ಅರ್ಥೈಸುವಿಕೆ ಮೂಲಕ ಲಿಂಗ ಸಮಾನತೆ ಸಮಾಜದ ಮುಂಗಾಣ್ಕೆಯನ್ನು ಒದಗಿಸುವ ಪ್ರಯತ್ನವೆಂದೇ ಹೇಳಬಹುದು.

ಹಿಂದಿ, ಮರಾಠಿಯಲ್ಲಿನ ನಮ್ಮ ಫೌಂಡೇಷನಲ್ ಲಿಟರಸಿ ಪ್ರೋಗ್ರಾಂ ಮೂಲಕ, ಚಿತ್ರಪುಸ್ತಕಗಳನ್ನು ಮುಖ್ಯ ಕಲಿಕಾ ಸಾಧನವಾಗಿ ಬಳಸಿಕೊಂಡು 1ರಿಂದ 3ನೇ ತರಗತಿಯ ಮಕ್ಕಳಲ್ಲಿ ಸರಾಗವಾದ ಓದು, ಗ್ರಹಿಕೆ ವೃದ್ಧಿಸುವ ಗುರಿ ಹೊಂದಿದ್ದೆವು. ವಿವಿಧ ಹಂತಗಳಲ್ಲಿರುವ, ಸೂಚಿತ ಕತೆ ಪುಸ್ತಕಗಳು, ಮೌಲ್ಯಮಾಪನ ಸಂಪನ್ಮೂಲಗಳಾದ ವರ್ಕ್ ಶೀಟ್‌ಗಳು, ಪ್ರಗತಿ ಸೂಚಕಗಳೆಲ್ಲವೂ ಆಯಾ ತರಗತಿ ಆಧಾರಿತ ಕಲಿಕಾ ಫಲಿತಾಂಶಗಳ ಜೊತೆ ಹೊಂದಿಕೊಂಡಿರುವ (ನಿಪುಣ್ ಭಾರತ್‌ದ ಮಾರ್ಗಸೂಚಿಯಂತೆ) ರೂಪರೇಖೆಗಳನ್ನೇ ಹೊಂದಿವೆ. ಈ ಎಲ್ಲ ವಿಷಯಗಳ ಪರಿಣಾಮವನ್ನು ಅಳೆಯಲೆಂದೇ ಅಸರ್ (ASER) ಸಹಯೋಗದಲ್ಲಿ ಆರಂಭಿಕ ಹಾಗೂ ಕೊನೆಯ ಹಂತದ ಸಮೀಕ್ಷೆಯನ್ನು ಸಹ ನಡೆಸಲಾಯಿತು.

ಇದಲ್ಲದೇ, ಛತ್ತೀಸ್‌ಘಡದ ಶಿಕ್ಷಣ ಇಲಾಖೆಯು, ನಮ್ಮ ಫೌಂಡೇಷನಲ್ ಲಿಟರಸಿ ಪ್ರೋಗ್ರಾಂ ಅನ್ನು ಪ್ರಿಂಟ್ ಪುಸ್ತಕಗಳ ಮೂಲಕ ಅಳವಡಿಸಿಕೊಂಡಿದೆ. ಐದು ವಲಯಗಳಲ್ಲಿ 250 ಮಾಸ್ಟರ್ ಟ್ರೈನರ್‌ಗಳ ಜೊತೆಗೆ ತರಬೇತಿ ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಇವರು 2023ರ ವೇಳೆಗೆ ದೇಶಾದ್ಯಂತ 90,000 ಶಿಕ್ಷಕರಿಗೆ ತರಬೇತಿ ನೀಡಲಿದ್ದಾರೆ. ಇದೇ ರಾಜ್ಯದಲ್ಲಿ 2.6 ದಶಲಕ್ಷ ಮಕ್ಕಳನ್ನು ತಲುಪಲು 5.4 ದಶಲಕ್ಷ ಪುಸ್ತಕಗಳನ್ನು ವಿತರಿಸಲಾಗಿದೆ.

ಗೋವಾ ಶಿಕ್ಷಣ ನಿರ್ದೇಶನಾಲಯ ಹಾಗೂ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ರಾಜ್ಯ ಮಂಡಳಿಯ(ಎಸ್‌ಸಿಇಆರ್‌ಟಿ) ಜೊತೆಗೂಡಿ, ರಾಜ್ಯಾದ್ಯಂತ 1ರಿಂದ 8ನೇ ತರಗತಿಯ ಎಲ್ಲಾ ಶಾಲಾ ಮಕ್ಕಳಿಗೆ ಓದಿನ ಕಾರ್ಯಕ್ರಮವೊಂದನ್ನು ಬಿಡುಗಡೆಗೊಳಿಸಿದೆವು. ನಿರ್ದಿಷ್ಟ ಕತೆ ಪುಸ್ತಕಗಳು, ನಾಲ್ಕೂ ಓದಿನ ಹಂತದ ಕತೆಗಳನ್ನು ನಿರ್ದಿಷ್ಟ ವಿಷಯ ಹಾಗೂ ಶಬ್ದಸಂಗ್ರಹಗಳ ಅನುಸಾರ ಪಟ್ಟಿ ಮಾಡಲಾಗಿತ್ತು. ಮರಾಠಿ, ಕೊಂಕಣಿ ಭಾಷೆಗಳ ಡಿಜಿಟಲ್, ಮುದ್ರಿತ ಪುಸ್ತಕ ರೀಡಿಂಗ್ ಕಾರ್ಯಕ್ರಮಕ್ಕಾಗಿ ಸೂಚಿತ ಚಟುವಟಿಕೆಗಳ ಪಟ್ಟಿಯನ್ನೂ ನೀಡಲಾಯಿತು.

ಯುನಿಸೆಫ್, ಎಸ್‌ಸಿಇಆರ್‌ಟಿ, ಔರಂಗಾಬಾದ್‌ನ ಪ್ರಾದೇಶಿಕ ಅಕಾಡೆಮಿ ಸಹಯೋಗದಲ್ಲಿ ಉರ್ದು ರೀಡಿಂಗ್ ಕಾರ್ಯಕ್ರಮವನ್ನು ಅಂತಾರಾಷ್ಟ್ರೀಯ ಮಾತೃಭಾಷಾ ದಿನ ಫೆಬ್ರವರಿ 21ರಂದು ಬಿಡುಗಡೆಗೊಳಿಸಲಾಯಿತು. ಇದರ ಅಂಗವಾಗಿ 80 ಪುಸ್ತಕಗಳನ್ನು ಅಭಿವೃದ್ಧಿಪಡಿಸಿ, 880 ಶಾಲೆಗಳಿಗೆ 37,000 ಪ್ರತಿಗಳನ್ನು ವಿತರಿಸಿದೆವು.

ಛತ್ತೀಸ್‌ಘಡ ಸರ್ಕಾರದ ಡಿಜಿಟಲ್ ರೀಡಿಂಗ್ ಅಭಿಯಾನವಾದ “ಪಢಾಯಿ ತುನ್ಹರ್ ದ್ವಾರ 2.0”ಗಾಗಿ 30,000 ಶಾಲೆಗಳಲ್ಲಿ ನಮ್ಮ Read@Home Foundational Literacy Programme ಅನ್ನು ಅಳವಡಿಸಿಕೊಂಡಿದೆ. ಇದರ ಜೊತೆಗೆ, ಮಾತೃಭಾಷೆಯಲ್ಲಿ ಓದುವ, ಓದಿನಲ್ಲಿ ಸ್ಥಿರತೆ ಕಾಯ್ದುಕೊಳ್ಳುವ ಸಲುವಾಗಿ ಅಗತ್ಯ ಸಂಪನ್ಮೂಲಗಳನ್ನು ಒದಗಿಸಲು ಛತ್ತೀಸ್‌ಘಡದ ಸ್ಥಳೀಯ ಭಾಷೆಗಳಾದ ಛತ್ತೀಸ್ಗರ್ಹಿ, ಗೊಂಡಿಗೆ ನಮ್ಮ ಕತೆಗಳನ್ನು ಅನುವಾದಿಸಲು ಕಾರ್ಯಾಗಾರಗಳನ್ನು ಸಹ ನಡೆಸುತ್ತಿದ್ದೇವೆ.




ದೇಶಾದ್ಯಂತ 25,000 ಶಾಲೆಗಳನ್ನು ಹೊಂದಿರುವ ಸಿಬಿಎಸ್‌ಇ ಜೊತೆಗೂಡಿ ಉದಯೋನ್ಮುಖ ಬರಹಗಾರರ ಕಾರ್ಯಕ್ರಮವನ್ನು ದೇಶಾದ್ಯಂತ ಕೈಗೊಳ್ಳಲು ಸಾಧ್ಯವಾಗಿದ್ದು ಸ್ಟೋರಿವೀವರ್ ಮೂಲಕ.

ಕ್ರೌಡ್‌ಫಂಡಿಂಗ್ ಮೂಲಕ ದೇಶದಾದ್ಯಂತ ಮಕ್ಕಳಿಗಾಗಿ ಗ್ರಂಥಾಲಯಗಳನ್ನು ಸ್ಥಾಪಿಸಲು ಡೊನೇಟ್-ಎ-ಬುಕ್ ಸಹಕಾರಿಯಾಗಿದೆ. 50ಕ್ಕೂ ಹೆಚ್ಚು ಪಟ್ಟಣ, ನಗರಗಳಲ್ಲಿನ 2,30,000 ಮಕ್ಕಳಿಗೆ 300ಕ್ಕೂ ಹೆಚ್ಚು ಲೈಬ್ರರಿ-ಇನ್-ಎ-ಕ್ಲಾಸ್‌ರೂಂ ಕಿಟ್ ಸೇರಿದಂತೆ ಒಟ್ಟು 55,000ಕ್ಕೂ ಹೆಚ್ಚು ಪುಸ್ತಕಗಳನ್ನು ವಿತರಿಸಿದ್ದೇವೆ.



ನಮ್ಮ ಅದ್ಭುತ ದಾನಿಗಳು, ಪಾಲುದಾರರು, ಸ್ವಯಂ ಸೇವಕ ಸಮೂಹದ ನಿರಂತರ ಬೆಂಬಲದಿಂದಾಗಿಯೇ ನಮ್ಮ ಧ್ಯೇಯೋದ್ದೇಶಗಳಿಗೆ ಬದ್ಧರಾಗಿರಲು ಸಾಧ್ಯವಾಗಿದೆ. ಇವರೆಲ್ಲರಿಗೂ ನಮ್ಮ ತುಂಬು ಹೃದಯದ ಧನ್ಯವಾದಗಳು. ಇಂತಹ ಹಲವು ಸಹಯೋಗಗಳು, ಸೃಜನಶೀಲತೆ, ಒಳಗೊಳ್ಳುವಿಕೆ, ತುಡಿತಗಳ ಮೂಲಕ ಮಕ್ಕಳು, ಬೋಧಕರ ವಲಯ ಸೇರಿದಂತೆ ಎಲ್ಲೆಡೆ ಬಹುದೊಡ್ಡ ಬದಲಾವಣೆ ತರಲು ನಾವು ಇನ್ನಷ್ಟು ಬದ್ಧರಾಗಿದ್ದೇವೆ.

ಪ್ರಥಮ್ ಬುಕ್ಸ್ ತಂಡ ಮತ್ತು ಟ್ರಸ್ಟಿಗಳ ಪರವಾಗಿ,



ಆರ್ ಶ್ರೀರಾಮ್,
ಚೇರ್‌ಪರ್ಸನ್ ಮತ್ತು ಕಾರ್ಯನಿರ್ವಾಹಕ ಟ್ರಸ್ಟಿ

# ಕುತೂಹಲದ ಹರಿಕಾರರು









ಪುಸ್ತಕಗಳು ಮಾಂತ್ರಿಕ ಲೋಕಕ್ಕೆ ರಹದಾರಿ ಇದ್ದಂತೆ. ಅವು ಮಕ್ಕಳನ್ನು ತಮಗೆ ಗೊತ್ತಿರುವ, ಗೊತ್ತಿರದ, ಹಳೆಯ, ಹೊಸ, ವಾಸ್ತವಿಕ, ಭ್ರಮೆಗಳ ಲೋಕಕ್ಕೆ ಕರೆದೊಯ್ಯಬಲ್ಲವು. ಹವಾಮಾನ ವೈಪರೀತ್ಯದಿಂದ ಮೊದಲಾಗಿ ಹೆಣ್ಣುಮಕ್ಕಳ ಸಬಲೀಕರಣ, ಸಂಸ್ಕೃತಿಯಿಂದ ಮೊದಲಾಗಿ ಸಾಮಾಜಿಕ-ಭಾವನಾತ್ಮಕ (ಸಂವೇದಾತ್ಮಕ) ಕಲಿಕೆ, ಸಂತಸದ ನಗು ಉಕ್ಕಿಸುವ ಕತೆಗಳು ನಮ್ಮ ಹೆಗ್ಗಳಿಕೆ. ಈ ಬಗೆಯ ಪುಸ್ತಕಗಳು ಮಕ್ಕಳಿಗೆ ಓದನ್ನು ಮಜವಾಗಿಸಿವೆ.

ರಾಜೀವ್ ಐಪ್ ಅವರ *ಹಲೋ, ಸೂರ್ಯ!* ಪುಸ್ತಕವು ನಿಸರ್ಗದ ಸೊಬಗನ್ನು ಸಂಭ್ರಮಿಸಿದೆ. ಅಪರ್ಣಾ ಕಪೂರ್ ಬರೆದು, ಕೃಷ್ಣ ಬಾಲ ಶೆಣೈ ಚಿತ್ರಿಸಿರುವ *ಕತ್ತಲ ಹ್ಯಾಂಗ ಸದ್ದು ಮಾಡ್ತೈತಿ?* ನಿತ್ಯದ ಬದುಕಿನಲ್ಲಿ ಅಡಗಿರುವ ಭಾವನೆಗಳು, ಮಾಂತ್ರಿಕತೆಯನ್ನು ನೆನಪಿಸುತ್ತವೆ. *ನಮಗೆ ಭರವಸೆಯಿದೆ: ಹವಾಮಾನ ಬದಲಾವಣೆಯ ಬಗ್ಗೆ ಮಕ್ಕಳ ಚಿಂತನೆ* ಕತೆಯು ಹವಾಮಾನ ಬದಲಾವಣೆ, ನಮ್ಮ ಬದುಕಿನ ಮೇಲೆ ಅದರ ಪರಿಣಾಮ ಕುರಿತು ಭಿನ್ನ ಪ್ರಾದೇಶಿಕತೆಯ 15 ಮಕ್ಕಳ ಭಾವನೆಗಳಿಗೆ ದನಿಯಾಗಿದೆ. ಈ ಪುಸ್ತಕಕ್ಕಾಗಿ 14 ಅದ್ಭುತ ಚಿತ್ರಕಾರರು ಜೊತೆಗೂಡಿದ್ದು, ರಾಧಾ ರಂಗರಾಜನ್ ಕತೆಗೆ ಪೂರಕ ಮಾಹಿತಿ ನೀಡಿದ್ದಾರೆ.

ಮಕ್ಕಳ ಪುಸ್ತಕಗಳು ನಮಗೆ ಬಲ ಕೊಡಬಲ್ಲವು, ಪ್ರೇರಣೆ ನೀಡಬಲ್ಲವು. *ಗ್ರೇಸ್: ವೈಜ್ಞಾನಿಕ ಶಿಕ್ಷಣ ಎಲ್ಲರಿಗೂ ಸಿಗುವಂತಾಗಲು ಒಬ್ಬ ಎಂಜಿನಿಯರ್ ಹೋರಾಟ* ಪುಸ್ತಕದ ನಾಯಕಿಯಂತೆ. ಇದು ಎಂಜನಿಯರ್ ಹಾಗೂ ಟ್ರಾನ್ಸ್ ಜೆಂಡರ್ ಕಾರ್ಯಕರ್ತೆ ಗ್ರೇಸ್ ಬಾನು ಅವರ ಅಸಾಮಾನ್ಯ ಬದುಕಿನ ಚಿತ್ರಣವೇ ಆಗಿದೆ. ಈ ಪುಸ್ತಕದ ಲೇಖಕರು ಸಾಯಂತನ್ ದತ್ತ, ಚಿತ್ರಗಳನ್ನು ಬರೆದವರು ಪ್ರಿಯಾ ದಾಲಿ. ನೇಹಾ ಸಿಂಗ್, ಸಬಾ ಖಾನ್ ಬರೆದು, ಅಲಫಿಯಾ ಹಸನ್ ಮತ್ತು ಪೈರೊ ಚಿತ್ರಿಸಿರುವ *ಗೋಲ್!* ಪುಸ್ತಕವು ಪರಚಮ್ ಕಲೆಕ್ಟಿವ್‌ನಲ್ಲಿರುವ ಅಸಾಧಾರಣ ಪ್ರತಿಭೆಯುಳ್ಳ ಹೆಣ್ಣುಮಕ್ಕಳ ಜೀವನದಿಂದ ಪ್ರೇರಿತಗೊಂಡಿದೆ. ಈ ಪುಸ್ತಕವು ಕ್ರೀಡೆ ತಂದುಕೊಡಬಲ್ಲ ಸ್ವಾತಂತ್ರ್ಯವನ್ನು ಸಂಭ್ರಮಿಸಿದೆ.

ನೇಹಾ ಸಿಂಗ್ ಬರೆದಿರುವ, ಶುಭಶ್ರೀ ಮಾಥುರ್ ಚಿತ್ರಿಸಿರುವ *ಬಾಹ್ಯಾಕಾಶದಲ್ಲೊಂದು ಹಾಡು: ಕೇಸರ್‌ಬಾಯಿ ಕೇರ್ಕರ್* ಇದು ಭಾರತದ ಕೇಸರ್‌ಬಾಯಿ ಕೇರ್ಕರ್ ಅವರ ದನಿಯನ್ನು ಭೂಮಿಯಿಂದ ಬಾಹ್ಯಾಕಾಶಕ್ಕೆ ಕೊಂಡೊಯ್ದ ಯಾತ್ರಿಕನ ಕತೆಯಾಗಿದೆ.

ಕನಾಟೊ ಜಿಮೊ ಅವರ *ನಾನು ಮತ್ತು ಆಘೋ* ಕತೆ ಹವಾಮಾನ ಬದಲಾವಣೆಗೊಂದು ಮಾದರಿ ಚಿತ್ರ ಪ್ರತಿಕ್ರಿಯೆ. ಅನು ಚೌಧರಿ-ಸೊರಾಬ್ಜೀ ಅವರು ಬರೆದು, ಕಾಲಿಘಟ್ ಪಟುವಾ ಕಲಾ ಶೈಲಿಯ ಪ್ರತಿಪಾದಕರಲ್ಲಿ ಪ್ರಮುಖರಾದ ಅನ್ವರ್ ಚಿತ್ರಕಾರ್ ಚಿತ್ರಿಸಿರುವ *ಮ್ಯೂಸಿಯಂನಲ್ಲೊಂದು ದಿನ* ಕತೆಯು ದೇಶಿ ಕಲೆಯನ್ನು ಒರೆಗೆ ಹಚ್ಚಿದೆ. ಗಜಲ್ ಖಾದ್ರಿ ಅವರ *ಬಾರೋ ವಸಂತ* ಕತೆಯು ಕಾಶ್ಮೀರದ ವಸಂತ ಋತುವಿನ ಹಲವು ಬಣ್ಣಗಳು, ಸಂಗೀತಕ್ಕೆ ಜೀವಂತಿಕೆ ನೀಡಿದೆ, ಇದರ ಜೊತೆಗೆ ನಿವೇದಿತಾ ಸುಬ್ರಮಣಿಯನ್ ಬರೆದಿರುವ *ಡಿಟೆಕ್ಟಿವ್ ದಮಯಂತಿ* ಯು ಚತುರೆ ದಮಯಂತಿಯ ಕತೆ ಆಗಿದೆ.

ಪ್ರಥಮ್ ಬುಕ್ಸ್‌ನ ಜನಪ್ರಿಯ ಪಾತ್ರಗಳಾದ ಪುಚ್ಕು, ಪುಚ್ಕುವಿನ ಸ್ನೇಹಿತರಾದ ಬೊಲ್ಲು, ಡೊಡ್ಲ *ಪುಚ್ಕುವಿಗೊಂದು ಸಾಹಸ* ಕತೆಯ ಮೂಲಕ ಮತ್ತೆ ಜೊತೆಯಾಗಿದ್ದಾರೆ. ದೀಪಾಂಜನಾ ಪಾಲ್ ಬರೆದು, ರಾಜೀವ್ ಐಪ್ ಚಿತ್ರಿಸಿದ್ದು, ಮೈಥಿಲಿ ದೋಶಿ ಅವರ ಕಲಾ ನಿರ್ದೇಶನ ಪುಸ್ತಕ ಅಂದವನ್ನು ಹೆಚ್ಚಿಸಿದೆ.

ಸಿಂಗಪುರ್ ಬುಕ್ ಕೌನ್ಸಿಲ್ ಸಹಯೋಗದ ಭಾಗವಾಗಿ ಪ್ರಥಮ್ ಬುಕ್ಸ್ ವತಿಯಿಂದ ಆನ್‌ಲೈನ್ ಕಾರ್ಯಾಗಾರ (ಏಷ್ಯನ್ ಫೆಸ್ಟಿವಲ್ ಆಫ್ ಚಿಲ್ಡ್ರನ್ಸ್ ಕಂಟೆಂಟ್ 2022) ನಡೆಸಲಾಯಿತು. ನಮ್ಮ ದೇಶ ಮಾತ್ರವಲ್ಲದೇ ಆಗ್ನೇಯ ಏಷ್ಯಾ ಭಾಗದ ಒಟ್ಟು 18 ಅಭ್ಯರ್ಥಿಗಳು ಇದರಲ್ಲಿ ಪಾಲ್ಗೊಂಡಿದ್ದರು. ತಲಾ ಐವರು ಲೇಖಕರು, ಚಿತ್ರಕಾರರು ಹಾಗೆಯೇ ನಾಲ್ವರು ಲೇಖಕ-ಚಿತ್ರಕಾರರು, ನಾಲ್ವರು ಅನುವಾದಕರನ್ನು ಒಳಗೊಂಡಿದ್ದು, 2 ದಿನಗಳ ಕಾರ್ಯಾಗಾರದಲ್ಲಿ ಒಟ್ಟು 9 ಪುಸ್ತಕಗಳ ರಚನೆ ಸಾಧ್ಯವಾಯಿತು. ಪ್ರತಿ ಪುಸ್ತಕವೂ ಒಂದಕ್ಕಿಂತ ಹೆಚ್ಚು ಭಾಷೆಗಳಲ್ಲಿ (ಹಿಂದಿ, ತಮಿಳು, ಚೀನಿ, ಮಲಯಾ) ಅನುವಾದ ಇಲ್ಲವೇ ದ್ವಿಭಾಷಾ ಪುಸ್ತಕವಾಗಿ ಲಭ್ಯವಿದೆ. ಮುಂದೆ ನಡೆದ ಫೆಸ್ಟಿವಲ್‌ನಲ್ಲಿ ಈ ಪುಸ್ತಕಗಳನ್ನು ಆನ್‌ಲೈನ್‌ನಲ್ಲಿ ಬಿಡುಗಡೆ ಮಾಡಲಾಯಿತು.

ಪ್ರಥಮ್ ಬುಕ್ಸ್‌ನ ಮೌಲ್ಯ, ತತ್ವಗಳನ್ನು ಎತ್ತಿ ಹಿಡಿಯಲು ಯುನಿಸೆಫ್ ಇಂಡಿಯಾದೊಂದಿಗೆ ಜೊತೆಗೂಡಿ *The World We Live in, the Words We Create* ಎಂಬ ಕೈಪಿಡಿಯೊಂದನ್ನು ರಚಿಸಿದೆವು. ವೈವಿಧ್ಯತೆ, ಒಳಗೊಳ್ಳುವಿಕೆಯ ಮೌಲ್ಯಗಳನ್ನು ಸಾರುವ ಚಿತ್ರಪುಸ್ತಕಗಳ ಮೂಲಕ ಮಕ್ಕಳಿಗೆ ವೈವಿಧ್ಯಮಯ ಹಾಗೆಯೇ ಒಳಗೊಳ್ಳುವಿಕೆ ಓದಿನ ಅನುಭವವನ್ನು ಪಡೆಯಲು ಇದು ನೆರವಾಗಲಿದೆ.
ಈ ಕೈಪಿಡಿ ಮುಕ್ತ ಪರವಾನಗಿಯನ್ನು ಹೊಂದಿದ್ದು, ಓದುಗರು ಉಚಿತವಾಗಿ ಓದಿ, ಹಂಚಿಕೊಳ್ಳಬಹುದು.









**“ಸಾಂಕ್ರಾಮಿಕ ಪಿಡುಗಿನಿಂದ ಓದಿನ ಮೇಲಾಗಿರುವ ಪರಿಣಾಮವೇನು?” “ಪ್ರೇರಕ ಶಕ್ತಿಯಂತಿರುವ ಕೆಲವು ಲೈಬ್ರರಿಯನ್‌ಗಳು, ಶಿಕ್ಷಕರನ್ನು ಭೇಟಿಯಾಗೋಣ.” “ನಮ್ಮ ಪುಸ್ತಕಗಳನ್ನು ಓದುಗರು ಹೇಗೆ ಗ್ರಹಿಸುತ್ತಾರೆ?”**

ಇಂತಹ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನ ನಡೆಸಿದೆವು. ಈ ಪ್ರಯತ್ನದ ಭಾಗವೇ Read with Me ಯೋಜನೆ. ಇದರ ಪ್ರಕಾರ, ಸಾಂಕ್ರಾಮಿಕ ಪಿಡುಗಿನ ನಂತರದ ಲೋಕದಲ್ಲಿ ಏನೇನಾಗಿದೆ ಎಂದು ತಿಳಿಯಲು ದೇಶಾದ್ಯಂತ ಹಲವು ಲೈಬ್ರರಿ, ಸಮುದಾಯ ಕೇಂದ್ರ, ಶಾಲೆಗಳಿಗೆ ಭೇಟಿ ನೀಡಿ ಸಾಕ್ಷರತೆ, ಓದುವಿಕೆಯ ವಾಸ್ತವಿಕ ಚಿತ್ರಣ ಪಡೆದೆವು. ಈ ಎಲ್ಲಾ ಭೇಟಿಗಳ ಒಟ್ಟು ಮಾಹಿತಿಯು ಇದೀಗ, ನಿರ್ದಿಷ್ಟ ಉದ್ದೇಶಪೂರ್ವಕ ಚಿತ್ರಪುಸ್ತಕಗಳ ತಯಾರಿಕೆಗೆ ತಾಜಾ ವಸ್ತು ಒದಗಿಸಿದೆ.

ಪ್ರಥಮ್ ಬುಕ್ಸ್‌ನ ಸ್ಟೋರಿವೀವರ್ ಯುನಿಸೆಫ್ ಜೊತೆಗೂಡಿ ಲಿಂಗ್ ಸಂಭವ್ ಮುಂದಾಳತ್ವದ ಭಾಗವಾಗಿ, ನಮ್ಮ ತೆರೆದ ಪುಸ್ತಕಗಳು, ತೆರೆದ ಬಾಗಿಲುಗಳು, ತೆರೆದ ಮನಸ್ಸುಗಳು: ಕತೆ ಪುಸ್ತಕಗಳ ಮೂಲಕ ಲಿಂಗ ಸಮಾನತೆಗಳ ಕಾರ್ಯಕ್ರಮವನ್ನು ಬಿಡುಗಡೆಗೊಳಿಸಿತು. ಇದರ ಅಡಿಯಲ್ಲಿ ಓದಿನ ಹಂತ ಆಧಾರಿತ ನಿರ್ದಿಷ್ಟ ಕತೆಗಳ ಪಟ್ಟಿಯ ಜೊತೆಗೆ ಶಿಕ್ಷಕರಿಗೆ ಪೂರಕ ವಿವರಣೆಯುಳ್ಳ ಸೆಷನ್ ಪ್ಲಾನ್‌ಗಳನ್ನ ಸಹ ನೀಡಲಾಯಿತು. ಇದರಲ್ಲಿ ಮೇನಕಾ ರಾಮನ್ ಬರೆದು, ಏಕ್ತಾ ಭಾರ್ತಿ ಚಿತ್ರಿಸಿರುವ *ನನಗೆ ನಾನಿಷ್ಟ* ಪುಸ್ತಕವೂ ಸೇರಿದೆ. ಈ ಪುಸ್ತಕವು ಸುಂದರವಾಗಿರುವುದು, ಎಲ್ಲರೂ ಇಷ್ಟಪಡುವಂತೆ ಇರುವ ಬಗೆಗಿನ ಪೂರ್ವಾಗ್ರಹಗಳನ್ನು ಪ್ರಶ್ನಿಸುತ್ತದೆ. ಅದೇ ರೀತಿ ಪ್ರಿಯಾ ಕುರಿಯನ್ ಅವರ *ಸುಂದರಿ ಕಾಣೆಯಾಗಿದ್ದಾಳೆ* ಮಹಿಳಾ ಇನ್ಸ್‌ಪೆಕ್ಟರ್ ಜಿನ್ನಿ ಎಂಬ ಹೆಸರಿನ ಮುಖ್ಯ ಪಾತ್ರಧಾರಿಯನ್ನು ಪರಿಚಯಿಸಿದ್ದು ಗಮನಾರ್ಹ ಪುಸ್ತಕವಾಗಿದೆ.

1ರಿಂ 5ನೇ ತರಗತಿಯ ಶಾಲಾ ಮಕ್ಕಳೊಂದಿಗೆ ಲಿಂಗ ಪರ ವಾದಗಳಲ್ಲಿ ಬಳಸಬಹುದಾದ ನಮ್ಮ ಪುಸ್ತಕಗಳ ಶಕ್ತಿಯನ್ನು ಮತ್ತೊಮ್ಮೆ ಒತ್ತಿ ಹೇಳಿದ ಕಾರ್ಯಕ್ರಮವಿದು. ಈ ಕಾರ್ಯಕ್ರಮದ ಆರಂಭಿಕ ಹಂತದ ಸಮೀಕ್ಷೆಯಲ್ಲಿ, ಶೇ.51 ಹೆಣ್ಣುಮಕ್ಕಳು ಮಾತ್ರ ಪೊಲೀಸ್ ಅಧಿಕಾರಿಯಾಗಲು ಲಿಂಗಭೇದವಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಅದೇ ಅಂತಿಮ ಹಂತದ ಸಮೀಕ್ಷೆಯಲ್ಲಿ ಶೇ.93ರಷ್ಟು ಮಕ್ಕಳು ತಮ್ಮ ಅಭಿಪ್ರಾಯ ಬದಲಿಸಿಕೊಂಡು, ಯಾವುದೇ ಲಿಂಗಭೇದ ಇರಬಾರದು ಎಂಬ ಅಭಿಪ್ರಾಯಪಟ್ಟರು.














# ಪ್ರಶಸ್ತಿಗಳು




## ಸುಂದರಿ ಕಾಣೆಯಾಗಿದ್ದಾಳೆ

ಬಿನೋದ್ ಕನೋರಿಯ ಅವಾರ್ಡ್ಸ್: ಚಿಲ್ಡ್ರನ್ಸ್ ಬುಕ್ ಅವಾರ್ಡ್ ಫಾರ್ ಇಂಗ್ಲಿಷ್ ಅರ್ಲಿ ರೀಡರ್ಸ್

ಬಿನೋದ್ ಕನೋರಿಯ ಅವಾರ್ಡ್ಸ್: ಚಿಲ್ಡ್ರನ್ಸ್ ಬುಕ್ ಅವಾರ್ಡ್ ಫಾರ್ ಇಲ್ಲಸ್ಟ್ರೇಷನ್ಸ್

ಆಟ ಗಲಾಟ-ಬೆಂಗಳೂರು ಲಿಟರೇಚರ್ ಫೆಸ್ಟಿವಲ್: ಬೆಸ್ಟ್ ಚಿಲ್ಡ್ರನ್ಸ್ ಪಿಕ್ಚರ್ ಬುಕ್ ಸ್ಟೋರಿ

ಪರಾಗ್ ಹಾನರ್ ಲಿಸ್ಟ್ 2023

## ದುಗ್ಗಾ

ಬಿನೋದ್ ಕನೋರಿಯ ಅವಾರ್ಡ್ಸ್: ಚಿಲ್ಡ್ರನ್ಸ್ ಬುಕ್ ಅವಾರ್ಡ್ ಫಾರ್ ಇಲ್ಲಸ್ಟ್ರೇಷನ್ಸ್

ಆಟ ಗಲಾಟ-ಬೆಂಗಳೂರು ಲಿಟರೇಚರ್ ಫೆಸ್ಟಿವಲ್: ಬೆಸ್ಟ್ ಚಿಲ್ಡ್ರನ್ಸ್ ಪಿಕ್ಚರ್ ಬುಕ್ ಇಲ್ಲಸ್ಟ್ರೇಷನ್ಸ್

ದಿ ಫೆಡರೇಷನ್ ಫಾರ್ ಇಂಡಿಯನ್ ಪಬ್ಲಿಷರ್ಸ್ ಅವಾರ್ಡ್ ಫಾರ್ ಎಕ್ಸಲೆನ್ಸ್ ಇನ್ ಬುಕ್ ಪ್ರೊಡಕ್ಷನ್: ಚಿಲ್ಡ್ರನ್ಸ್ ಬುಕ್ಸ್, ಜನರಲ್ ಇಂಟರೆಸ್ಟ್, 0-10 ಇಯರ್ಸ್

ಪರಾಗ್ ಹಾನರ್ ಲಿಸ್ಟ್ 2023

## ಬಿ ಆರ್ ಅಂಬೇಡ್ಕರ್: ಪುಸ್ತಕದೊಳಗೊಂದು ಉಜ್ವಲ ಬದುಕು

ನಿಸ್ಸಿಮ್ ಪ್ರೈಜ್ ಫಾರ್ ಎಕ್ಸಲೆನ್ಸ್ ಇನ್ ಲಿಟರೇಚರ್: ವಿಶೇಷ ಗೌರವ

## ಅಸಾಮೊ, ಅದು ನೀನಾ?

ಎಫ್ಐಸಿಸಿಐ ಪಬ್ಲಿಷಿಂಗ್ ಅವಾರ್ಡ್ಸ್, ಬುಕ್ ಆಫ್ ದಿ ಇಯರ್: ಒಟ್ಟು ವಿನ್ಯಾಸ

# ಮನೆ

ಎಫ್‌ಐಸಿಸಿಐ ಪಬ್ಲಿಷಿಂಗ್ ಅವಾರ್ಡ್ಸ್: ಚಿಲ್ಡ್ರನ್ಸ್ ಬುಕ್ ಆಫ್ ದಿ ಇಯರ್

# ದೆವ್ವಗಳ ರಂಗಶಾಲೆ

ಪರಾಗ್ ಹಾನರ್ ಲಿಸ್ಟ್ 2023

# ಗಿಡಕ್ಕೆ ಕೊರಳಾದವಳು

ಪರಾಗ್ ಹಾನರ್ ಲಿಸ್ಟ್ 2023

# ನನ್ನ ಓಣಿ

ಪರಾಗ್ ಹಾನರ್ ಲಿಸ್ಟ್ 2023


# ಕಾಡು ಎಚ್ಚೆತ್ತಾಗ

ಪರಾಗ್ ಹಾನರ್ ಲಿಸ್ಟ್ 2023

# ಜೀರುಂಡೆಗಳೂರಲ್ಲಿ

ಪರಾಗ್ ಹಾನರ್ ಲಿಸ್ಟ್ 2023













# ಅವಕಾಶಗಳ ಹರಿಕಾರರು

storyweaver PRATHAM BOOKS



## 24 ಮಿಲಿಯನ್ ರೀಡ್ಸ್, 332 ಭಾಷೆಗಳು, 50,000ಕ್ಕೂ ಹೆಚ್ಚು ಕತೆಗಳು

ಪೂರ್ವ ಪ್ರಾಥಮಿಕ ಶಿಕ್ಷಣದಲ್ಲೇ ದೇಶದ ಮೊದಲ ಡಿಜಿಟಲ್ ಪಬ್ಲಿಕ್ ಗುಡ್ ಎನಿಸಿಕೊಂಡಿರುವ ಸ್ಟೋರಿವೀವರ್, ಮಕ್ಕಳ ಓದಿನ ಹಂತಗಳನ್ನು ಸುಧಾರಿಸಲು ಶೈಕ್ಷಣಿಕ ಪರಿಸರದೊಂದಿಗೆ ವ್ಯಾಪಕವಾಗಿ ತೊಡಗಿಸಿಕೊಂಡಿದೆ. ಈ ವೇದಿಕೆಯಲ್ಲಿ ಗುಣಮಟ್ಟದ ಕತೆ ಪುಸ್ತಕಗಳನ್ನು ಉಚಿತವಾಗಿ ಓದಿ, ಮರು ಸೃಷ್ಟಿಸಬಹುದು ಅಥವಾ ಬಳಕೆದಾರರೇ ಅನುವಾದಿಸಲು ಸಾಧ್ಯವಿದೆ. ಅಲ್ಲದೇ, ಸ್ಥಳೀಯ, ಅಳಿವಿನಂಚಿನಲ್ಲಿರುವ ಭಾಷೆಗಳ ಮುಖ್ಯ ವೇದಿಕೆ ಎಂಬುದಕ್ಕೆ ವೇದಿಕೆಯಲ್ಲಿ ಶೇ.65 ಇಂತಹ ಭಾಷೆಗಳು ಪ್ರಾತಿನಿಧ್ಯ ಸಾಧಿಸಿರುವುದೇ ಸಾಕ್ಷಿಯಾಗಿದೆ. ಉದಾಹರಣೆಗೆ, ಈ ವರ್ಷ ನಮ್ಮ ಕತೆಗಳನ್ನು ಅಳಿವಿನಂಚಿನಲ್ಲಿರುವ ಹಾಗೂ ತೀವ್ರ ಅಳಿವಿನಂಚಿನಲ್ಲಿರುವ ಭಾಷೆಗಳಾದ ಬುರಾ, ಎರ್ಜ್ಯಾ, ನಾನ್ಯೆ, ರುಸಿನ್, ಲೆಪ್ಚಾದಂತಹ ಭಾಷೆಗಳಿಗೂ ಅನುವಾದಿಸಲಾಗಿದೆ. ನಮ್ಮ ಪ್ರಮುಖ ಪಾಲುದಾರರಾದ ಸರ್ಕಾರ, ಲೈಬ್ರರಿಗಳು, ಶಿಕ್ಷಕರು, ರೀಡಿಂಗ್ ಚಾಂಪಿಯನ್ಸ್‌ಗಾಗಿ ಈ ವೇದಿಕೆಯಲ್ಲಿ ಓದು, ಕಲಿಕೆಗೆ ವಿಶೇಷ ಕಾರ್ಯಕ್ರಮಗಳನ್ನು ಸಹ ರೂಪಿಸಲಾಗಿದೆ.

ಚಿತ್ರಪುಸ್ತಕಗಳ ಮೂಲಕ 1ರಿಂದ 3ನೇ ತರಗತಿವರೆಗಿನ ಮಕ್ಕಳಲ್ಲಿ ಸರಾಗ ಓದು, ಗ್ರಹಿಕೆಯನ್ನು ಸುಧಾರಿಸಲೆಂದೇ ಫೌಂಡೇಷನಲ್ ಲಿಟರಸಿ ಪ್ರೋಗ್ರಾಂ ಅನ್ನು ವಿನ್ಯಾಸಗೊಳಿಸಿದೆವು. ಈ ಕಾರ್ಯಕ್ರಮವು ಅದರ ಅನುಸಾರವಾಗಿ ಸಂಪನ್ಮೂಲಗಳನ್ನು ಒಳಗೊಂಡಿದೆ. ತರಗತಿ ಅನುಸಾರ, ವಯೋಮಾನಕ್ಕೆ ಅನುಗುಣವಾದ ಕತೆ ಪುಸ್ತಕಗಳು, ಮೌಲ್ಯಮಾಪನಗಳು, ಮುದ ನೀಡುವ ಚಟುವಟಿಕೆ ಪುಟಗಳು, ಸ್ಟೋರಿವೀವರ್‌ನದ್ದೇ ಆದ ರೀಡ್ ಅಲಾಂಗ್ಸ್ ಅಥವಾ ಆಡಿಯೋ ವಿಷ್ಯುಯಲ್ ಪುಸ್ತಕಗಳು ಇದರಲ್ಲಿ ಅಡಕಗೊಂಡಿವೆ. ಛತ್ತೀಸ್‌ಘಡದ ಬೆರ್ಲಾ, ರಾಜಸ್ಥಾನದ ರೈಲ್‌ಮಗ್ರಾದಲ್ಲಿ ನಡೆದ ಯಶಸ್ವಿ ಕ್ಷೇತ್ರ ಅಧ್ಯಯನದ ಬೆನ್ನಲ್ಲೇ ಇದರ ವ್ಯಾಪ್ತಿಯೂ ವಿಸ್ತರಿಸಿದ್ದು, ಡಿಜಿಟಲ್, ಪ್ರಿಂಟ್ ಆವೃತ್ತಿಗಳಲ್ಲಿ ಛತ್ತೀಸ್‌ಘಡ, ಮಹಾರಾಷ್ಟ್ರದಲ್ಲಿ ಈ ಸಂಪನ್ಮೂಲಗಳು ಲಭ್ಯವಿವೆ.

ಎಸ್‌ಸಿಇಆರ್‌ಟಿ ಛತ್ತೀಸ್‌ಘಡ ಮತ್ತು ಮಹಾರಾಷ್ಟ್ರದ ಸಹಯೋಗದಲ್ಲಿ, ಫೌಂಡೇಷನಲ್ ಲಿಟರಸಿ ಕಾರ್ಯಕ್ರಮದ ಪುಸ್ತಕಗಳನ್ನು ಛತ್ತೀಸ್‌ಘಡದ 30,000ಕ್ಕೂ ಹೆಚ್ಚು ಪ್ರಾಥಮಿಕ ಶಾಲೆಗಳ ಮೂಲಕ 2.6 ದಶಲಕ್ಷ ಮಕ್ಕಳಿಗೆ ತಲುಪಿಸಿದ್ದೇವೆ. ಮಹಾರಾಷ್ಟ್ರದಲ್ಲಂತೂ ಒಟ್ಟು 42,000 ಶಾಲೆಗಳ ಮೂಲಕ 4 ದಶಲಕ್ಷ ಮಕ್ಕಳನ್ನು ತಲುಪಲು ಸಾಧ್ಯವಾಗಿದೆ.

**ಛತ್ತೀಸ್‌ಘಡ**
**5.4 ದಶಲಕ್ಷ ಪುಸ್ತಕಗಳು**
**30,000 ಶಾಲೆಗಳು**
**2.6 ದಶಲಕ್ಷ ವಿದ್ಯಾರ್ಥಿಗಳು**

**ಮಹಾರಾಷ್ಟ್ರ**
**2.2 ದಶಲಕ್ಷ ಪುಸ್ತಕಗಳು**
**42,000 ಶಾಲೆಗಳು**
**4 ದಶಲಕ್ಷ ವಿದ್ಯಾರ್ಥಿಗಳು**

1ರಿಂದ 8ನೇ ತರಗತಿವರೆಗಿನ ಮಕ್ಕಳಿಗಾಗಿ ಸ್ಟೋರಿವೀವರ್‌ನಲ್ಲಿ ರೂಪಿಸಿರುವ ಪ್ರಥಮ್ ಬುಕ್ಸ್ ರೀಡಿಂಗ್ ಪ್ರೋಗ್ರಾಂ, ಓದಿನ ಸಂತಸವನ್ನು ಪರಿಚಯಿಸಿ, ಅಭಿರುಚಿ ಬೆಳೆಸಲು ರೂಪಿಸಿರುವ ಕಾರ್ಯಕ್ರಮವೇ ಆಗಿದೆ. ಇಲ್ಲಿ ಪಟ್ಟಿ ಮಾಡಿರುವ ಪುಸ್ತಕಗಳು ತರಗತಿ ಆಧಾರಿತ ಸೂಕ್ತ ವಿಷಯಗಳು, ಭಾಷೆಯ ಜೊತೆಗೆ, ಸೂಚಿತ ಚಟುವಟಿಕೆಗಳನ್ನು ಸಹ ಹೊಂದಿವೆ. ಇವಿಷ್ಟೂ ಸಂಪನ್ಮೂಲಗಳು ಇಂಗ್ಲಿಷ್, ಹಿಂದಿ ಮಾತ್ರವಲ್ಲದೇ ಮರಾಠಿ, ಉರ್ದು, ಅರೇಬಿಕ್, ಫಾರ್ಸಿ, ಫ್ರೆಂಚ್, ಕೊಂಕಣಿಯಲ್ಲೂ ಲಭ್ಯವಿವೆ.

ಸಿಬಿಎಸ್‌ಇ, ಯುನಿಸೆಫ್, ಎಂಎಸ್‌ಸಿಇಆರ್‌ಟಿ ಹಾಗೂ ಇತರೆ ಪಾಲುದಾರರೊಂದಿಗೆ ಸೇರಿ ದೇಶಾದ್ಯಂತ ಸರದಿಯಲ್ಲಿ ಸಜ್ಜುಗೊಳಿಸಿದ್ದ ಈ ಕಾರ್ಯಕ್ರಮವು, ಮಾತೃಭಾಷೆಯಲ್ಲೇ ಸಂಪನ್ಮೂಲಗಳನ್ನು ಒದಗಿಸಿದ್ದು ಹೆಚ್ಚು ಪರಿಣಾಮಕಾರಿಯಾಗಿತ್ತು. ಇದರಿಂದ ಮಕ್ಕಳಲ್ಲಿ ಶಬ್ದ ಸಂಪತ್ತು ವೃದ್ಧಿಸಲು ಮಾತ್ರವಲ್ಲದೇ ಕತೆಗಳು, ತಮ್ಮದೇ ಬದುಕಿಗೆ ಹೋಲಿಕೆ ತರುವ ಅಂಶಗಳನ್ನು ಗ್ರಹಿಸುವಲ್ಲಿ ನೆರವಾಗಿವೆ. ದಿ ಗೋವಾ ಇಸ್ ರೀಡಿಂಗ್ ಅಭಿಯಾನ ಕೂಡ ಗೋವಾದ ಶಿಕ್ಷಣ ನಿರ್ದೇಶನಾಲಯದ ಜೊತೆಗಿನ ಇಂತಹುದೇ ಒಂದು ರಾಜ್ಯಮಟ್ಟದ ಸಹಭಾಗಿತ್ವ ಆಗಿತ್ತು. ಈ ಕಾರ್ಯಕ್ರಮವನ್ನು ಗೋವಾ ರಾಜ್ಯದ ಸರ್ಕಾರಿ, ಅನುದಾನಿತ ಶಾಲೆಗಳಲ್ಲಿ ಅನುಷ್ಠಾನಗೊಳಿಸಲಾಯಿತು.



"ಮಕ್ಕಳು ಫೌಂಡೇಷನಲ್ ಲಿಟರಸಿ ಕಾರ್ಯಕ್ರಮದಲ್ಲಿ ಅಡಕಗೊಂಡಿರುವ ವರ್ಣಮಯ ಪುಸ್ತಕಗಳನ್ನು ಆಸಕ್ತಿಯಿಂದ ಓದುತ್ತಿರುವುದನ್ನು ನೋಡಿದೆ. ಮಕ್ಕಳು ಹೆಚ್ಚು ಹೊತ್ತು ಓದುವಷ್ಟು ಸುಧಾರಣೆ ಕಂಡಿದ್ದಾರೆ. ಹಿಂದಿ ಭಾಷೆ ಕಲಿಕೆಗೆ ಹೆಚ್ಚುವರಿ ಸಂಪನ್ಮೂಲ ಒದಗಿರುವುದು ನಿಜಕ್ಕೂ ಖುಷಿಯಾಗಿದೆ. ನನ್ನ ತರಗತಿಯಲ್ಲಿ ಕ್ಲಾಸ್ ತಗೊಳ್ಳಲು ನಾನು ಇಲ್ಲದಾಗ ಮಕ್ಕಳು ಎಫ್‌ಎಲ್‌ಪಿ ಪುಸ್ತಕಗಳನ್ನು ಓದುತ್ತಿರುತ್ತಾರೆ."

*ಗುಲ್ಜಾರ್ ಬರೆತ್, ಶಿಕ್ಷಕಿ, ಸರ್ಕಾರಿ ಪ್ರಾಥಮಿಕ ಶಾಲೆ ಅಮೋದಿ,*
*ಜಾಂಜ್ಗೀರ್ ಚಂಪಾ, ಛತ್ತೀಸ್‌ಘಡ*



ಯುನಿಸೆಫ್ ಔರಂಗಾಬಾದ್, ಯುನಿಸೆಫ್, ಎಸ್‌ಸಿಇಆರ್‌ಟಿ ಮತ್ತು ರಿಜನಲ್ ಅಕಾಡೆಮಿಕ್ ಅಥಾರಿಟಿ ಸಹಭಾಗಿತ್ವದ ಉರ್ದು ರೀಡಿಂಗ್ ಪ್ರೋಗ್ರಾಂ ಅನ್ನು ಅಂತಾರಾಷ್ಟ್ರೀಯ ಮಾತೃಭಾಷಾ ದಿನದಂದೇ (21 ಫೆಬ್ರವರಿ) ಬಿಡುಗಡೆ ಗೊಳಿಸಲಾಯಿತು. ಇದರ ಅಂಗವಾಗಿ 80 ಉರ್ದು ಪುಸ್ತಕಗಳನ್ನು ಅಭಿವೃದ್ಧಿಪಡಿಸಿ, 880ಕ್ಕೂ ಹೆಚ್ಚು ಶಾಲೆಗಳಲ್ಲಿ 37,000 ಪ್ರಿಂಟ್ ಪುಸ್ತಕಗಳನ್ನು ವಿತರಿಸಲಾಯಿತು.

ಗೋಷ್ಟಿಚಾ ಶನಿವಾರ್ (ಕತೆಗಳ ಶನಿವಾರ) ಕಾರ್ಯಕ್ರಮವು ಯುನಿಸೆಫ್ ಮಹಾರಾಷ್ಟ್ರ ಹಾಗೂ ಮಹಾರಾಷ್ಟ್ರ ಶಿಕ್ಷಣ ಸಚಿವಾಲಯದ ಸಹಯೋಗದೊಂದಿಗೆ ನಡೆದ ಐದು ತಿಂಗಳ ಓದಿನ ಚಟುವಟಿಕೆಯಾಗಿತ್ತು. ಮುಖ್ಯವಾಗಿ ಮರಾಠಿ, ಉರ್ದು, ಇಂಗ್ಲಿಷಿನಲ್ಲಿ ಕತೆಗಳ ಮೂಲಕ ಕಲಿಕೆಯನ್ನು ಪ್ರೋತ್ಸಾಹಿಸುವ ಪ್ರಯತ್ನ ಇದಾಗಿತ್ತು. ಕೋವಿಡ್ ಕಾರಣಗಳಿಂದಾಗಿ ಶಾಲೆಯಿಂದ ಹೊರಗುಳಿದಿದ್ದ ಮಕ್ಕಳಲ್ಲಿನ ಕಲಿಕಾ ನಷ್ಟವನ್ನು ಸರಿದೂಗಿಸಲು ಈ ಕಾರ್ಯಕ್ರಮವನ್ನು ಅಭಿವೃದ್ಧಿ ಪಡಿಸಲಾಯಿತು. ಈ ಕಾರ್ಯಕ್ರಮವು 0.3 ದಶಲಕ್ಷ ಶಿಕ್ಷಕರು, ಚಿಣ್ಣರ ಕ್ಷೇತ್ರದ ಕಾರ್ಯಕರ್ತರನ್ನು ಒಳಗೊಂಡಿತ್ತು. ಮಹಾರಾಷ್ಟ್ರದಾದ್ಯಂತ 2.5 ದಶಲಕ್ಷ ಮಕ್ಕಳಿಗೆ ಈ ಕಾರ್ಯಕ್ರಮ ಪ್ರತಿಫಲ ನೀಡಿದೆ.

ದೀರ್ಘಕಾಲದಲ್ಲಿ ಈ ಕಾರ್ಯಕ್ರಮದ ಸ್ಥಿರತೆಯನ್ನು ಖಾತ್ರಿ ಪಡಿಸಿಕೊಳ್ಳಲು, ಪಾಲುದಾರರೊಂದಿಗೆ ಕೌಶಲಾಭಿವೃದ್ಧಿ ವರ್ಕ್‌ಶಾಪ್‌ಗಳನ್ನು ಸಹ ನಡೆಸಲಾಯಿತು. ಈ ಕಾರ್ಯಕ್ರಮದ ವಿನ್ಯಾಸವನ್ನು ಮಹಾರಾಷ್ಟ್ರ ಶಿಕ್ಷಣ ಸಚಿವಾಲಯವು ತನ್ನ ರಾಜ್ಯವ್ಯಾಪಿ ಮುಂದಾಳತ್ವವಾದ ನಿಪುಣ್ ಭಾರತ್ ಮಿಷನ್‌ನ ಎಫ್‌ಎಲ್‌ಎನ್ ಅಡಿ ಸೇರಿಸಿದೆ. ಸ್ಟೋರಿವೀವರ್‌ನ ಫೌಂಡೇಷನಲ್ ಲಿಟರಸಿ ಪ್ರೋಗ್ರಾಂ ಅಡಿ ಪಟ್ಟಿ ಮಾಡಿರುವ ಕತೆಗಳೆಲ್ಲವೂ ಆ ರಾಜ್ಯದ ಫೌಂಡೇಷನಲ್ ಲಿಟರಸಿ, ನ್ಯೂಮರಸಿ ಲೈಬ್ರರಿಗಳ ಭಾಗವಾಗಿದ್ದು, 2.5 ದಶಲಕ್ಷ ಮಕ್ಕಳನ್ನು ತಲುಪುತ್ತಿವೆ.


ಮಕ್ಕಳಲ್ಲಿನ ಕಲ್ಪನಾಶಕ್ತಿಯನ್ನು ಪೋಷಿಸಲು ನಡೆದ ಉದಯೋನ್ಮುಖ ಲೇಖಕರ ಕಾರ್ಯಕ್ರಮವು ಸಿಬಿಎಸ್‌ಇ ರೀಡಿಂಗ್ ಮಿಷನ್‌ನ ಮುಂದುವರಿದ ಭಾಗವಾಗಿತ್ತು. ಓದುವುದರ ಜೊತೆಗೆ ಸೃಜನಶೀಲ ಬರೆವಣಿಗೆಯತ್ತಲೂ ವಿದ್ಯಾರ್ಥಿಗಳ ಗಮನ ಸೆಳೆಯಿತು. ಇದರ ಅಂಗವಾಗಿ ಕೌಶಲಾಧರಿತ ಕಾರ್ಯಾಗಾರಗಳು ಹಾಗೂ ಸಲಹಾ ಸೆಷನ್ನುಗಳು ನಡೆದವು. 25,000 ಸಿಬಿಎಸ್‌ಇ ಶಾಲೆಗಳ 5ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಈ ಸೃಜನಶೀಲ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

"ನಾನು ಕ್ಲಾಸಿನಲ್ಲಿ *ಗುಲ್ಲಿಯ ವಸ್ತುಗಳ ಡಬ್ಬಿ* ಕತೆಯನ್ನು ಓದಿದೆ. ಈ ಕತೆಯಲ್ಲಿ ಬಹುತೇಕ ಸಮಸ್ಯೆಗಳಿಗೆ ಆ ಚಿಕ್ಕ ಡಬ್ಬಿಯಲ್ಲಿರುವ ಸಾಧನಗಳಿಂದ ಪರಿಹಾರ ನೀಡಲಾಗಿದೆ. ಈ ಕತೆ ಓದಿದ ನಂತರದ ವಾರಗಳಲ್ಲಿ ಈ ರೀತಿ ಉಪಯೋಗಕ್ಕೆ ಬರುವ, ವ್ಯರ್ಥವಾಗಿ ಎಸೆದಿರುವ ವಸ್ತುಗಳನ್ನೆಲ್ಲಾ ಮಕ್ಕಳು ಅದೇ ರೀತಿಯ ಡಬ್ಬಿಯಲ್ಲಿ ಹಾಕಿ ಇಟ್ಟಿದ್ದು ಕಂಡುಬಂತು! ರೀಡಿಂಗ್ ಪ್ರೋಗ್ರಾಂ ಅನ್ನು ಬಳಸಿದ ಎರಡೇ ತಿಂಗಳಲ್ಲಿ, ಮಕ್ಕಳು ಪ್ರತಿ ಕತೆಯನ್ನೂ ಗಟ್ಟಿಯಾಗಿ ಓದಲು ಇಷ್ಟಪಡುತ್ತಿದ್ದಾರೆ. ಈ ಎಲ್ಲಾ ಕತೆಗಳು ನಿತ್ಯ ಜೀವನಕ್ಕೆ ಹತ್ತಿರವಾಗಿದ್ದು ಸುಲಭವಾಗಿ ಅರ್ಥವಾಗುತ್ತವೆ, ಆತ್ಮವಿಶ್ವಾಸವನ್ನೂ ಹೆಚ್ಚಿಸುತ್ತವೆ. ಮಕ್ಕಳ ಸೃಜನಶೀಲತೆ, ಗ್ರಹಿಸುವ, ಕೇಳುವ, ಓದುವ ಕೌಶಲಗಳಲ್ಲಿ ಗಮನಾರ್ಹ ಸುಧಾರಣೆಗಳಾಗಿವೆ. ರೀಡಿಂಗ್ ಪ್ರೋಗ್ರಾಂನ ಮಹತ್ವ ಏನೆಂದರೆ ಇದಕ್ಕಾಗಿ ಪಟ್ಟಿ ಮಾಡಿರುವ ಕತೆಗಳನ್ನೆಲ್ಲ, ಪಠ್ಯಕ್ಕೆ ಅನುಗುಣವಾಗಿ ಹೊಂದಿಸಬಹುದಾಗಿದೆ."

*ಶಾಲಿನಿ ಗುಪ್ತಾ, ಗ್ರಂಥಪಾಲಕಿ, ಪುರ್ಕಲ್ ಯುತ್ ಡೆವೆಲಪ್‌ಮೆಂಟ್ ಸೊಸೈಟಿ, ಉತ್ತರಾಖಂಡ*

3ನೇ ತರಗತಿಯ ಶೇ.50 ವಿದ್ಯಾರ್ಥಿಗಳಲ್ಲಿ ಮಾತ್ರ ಗಣಿತ, ವಿಜ್ಞಾನ, ಪರಿಸರ ವಿಜ್ಞಾನ ವಿಷಯಗಳ (ಇವಿಎಸ್) ಕಲಿಕೆ ಸಾಧಾರಣವಾಗಿದೆ ಎನ್ನುತ್ತದೆ ರಾಷ್ಟ್ರೀಯ ಸಾಧನೆ ಸಮೀಕ್ಷೆಯ 2017ರ ವರದಿ (ಎನ್‌ಎಎಸ್ 2017). ಈ ಪ್ರಮಾಣವು 5ರಿಂದ 8ನೇ ತರಗತಿ ವರೆಗಿನ ಮಕ್ಕಳಲ್ಲಿ ಮತ್ತಷ್ಟು ಇಳಿಕೆಯನ್ನು ಸಹ ಕಂಡಿದೆ. ದುಬಾರಿ ಮೂಲ ಸೌಕರ್ಯಗಳ ಅವಲಂಬನೆ ಇಲ್ಲದೆ, ಪ್ರಾಥಮಿಕ ಹಂತದ ಕಲಿಕೆಯಲ್ಲಿ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಗಣಿತ ಕೌಶಲಗಳನ್ನು ಪೋಷಿಸುವ ಅಗತ್ಯವು ಎಂದಿಗಿಂತ ಹೆಚ್ಚಾಗಿದೆ.

**“ನೀವೇನಾದರೂ ಹೊಸ ಮಶೀನುಗಳನ್ನು ವಿನ್ಯಾಸಗೊಳಿಸುವಲ್ಲಿ ಆಸಕ್ತಿ ಹೊಂದಿರುವ ವಿಜ್ಞಾನಿಯಾಗಿದ್ದರೆ, ಏನನ್ನು ಸೃಷ್ಟಿಸುವಿರಿ? ಆ ಮಶೀನನ್ನು ಚಿತ್ರಿಸಿ, 50 ಪದಗಳಲ್ಲಿ ಅದರ ಕಾರ್ಯವನ್ನು ವಿವರಿಸಿ.”**




ಮೇಲಿನ ಈ ಪ್ರಶ್ನೆ ಸಿಬಿಎಸ್‌ಇ ರೀಡಿಂಗ್ ಮಿಷನ್‌ನ ಚಟುವಟಿಕೆಯೊಂದರಿಂದ ಆಯ್ದುಕೊಂಡಿದ್ದು. ನವದೆಹಲಿ ಟ್ಯಾಗೋರ್ ಗಾರ್ಡನ್ ಸಮೀಪವಿರುವ ಹೋಲಿ ಚೈಲ್ಡ್ ಸೀನಿಯರ್ ಸೆಕೆಂಡ್ ಸ್ಕೂಲ್‌ನ 3ನೇ ತರಗತಿ ವಿದ್ಯಾರ್ಥಿನಿ ದಿಯಾ, ರಾಹುಲ್ ರಾಘವನ್ ಬರೆದು, ರವಿ ಗುಪ್ತ ಚಿತ್ರಿಸಿರುವ ಶಿಳ್ಳೆಗೆ ಒಳ್ಳೇ ಉಪಾಯ ಕತೆಯನ್ನು ಓದಿ, ಈ ಮೇಲಿನಂತೆ ತನ್ನ 'ಕನಸಿನ ಗ್ಯಾಸ್ ಸ್ಟೌ'ನ ಚಿತ್ರ ಬರೆದು ವಿವರಿಸಿದ್ದಾರೆ.

**ಸ್ಟೋರಿವೀವರ್‌ನಲ್ಲಿರುವ ನಮ್ಮ STEM ಲಿಟರಸಿ ಪ್ರೋಗ್ರಾಂ ಕುರಿತು ಸಾಮಾಜಿಕ ಜಾಲತಾಣದಲ್ಲಿ ಬಂದ ಪ್ರತಿಕ್ರಿಯೆಗಳು**

**ರಿಜ್ ಮಲ್ಲಿಕ್**
ನನಗಂತೂ ಪುಸ್ತಕಗಳ ಗುಣಮಟ್ಟ, ಸಂಗ್ರಹ ಅತ್ಯುತ್ತಮ ಮೌಲ್ಯದ್ದು ಎನಿಸಿತು.

**ದಿವ್ಯಾ ಸೋಲಂಕಿ**
ಸುಂದರ ಪರಿಕಲ್ಪನೆ

**ಫ್ಲಾರೆನ್ಸ್ ಬಿಬ್ಬಿನ್**
ಅತ್ಯದ್ಭುತ ಪುಸ್ತಕಗಳ ಸಂಗ್ರಹ

**ಶಶಿ ಬಾಲ ವ್ಯಾಸ್ ಕುರಿಯಲ್**
ಉತ್ತಮ ಸಂಗ್ರಹ

**ಮನೀಷಾ ಜಿ ಭಿಸೆ**
21ನೇ ಜನವರಿಯಂದು 5,6,7ನೇ ತರಗತಿ ಮಕ್ಕಳಿಗಾಗಿ STEM ಕತೆಗಳ ಮೇಲೆ ಕಾರ್ಯಕ್ರಮ ನಡೆಸಲು ನಾನು ಮುರ್ಬಾದ್‌ಗೆ ಹೋಗಿದ್ದೆ. ಅಲ್ಲಿ ನಿಮ್ಮ ಅದ್ಭುತ ಕಥಾ ಸಂಗ್ರಹದ ರೆಫರೆನ್ಸ್ ಕೂಡ ನೀಡಿದೆ. ಒಬ್ಬ ಸ್ಟೋರಿಟೆಲ್ಲರ್, ಎಜುಕೇಟರ್ ಆಗಿ ಎಲ್ಲರಿಗೂ ಸಿಗುವಂತಿರುವ ಈ ಪುಸ್ತಕಗಳಿಗಾಗಿ ಪ್ರಥಮ್ ಬುಕ್ಸ್ ಅನ್ನು ವಿಶೇಷವಾಗಿ ಅಭಿನಂದಿಸುತ್ತೇನೆ.

ಇದಕ್ಕೆ ಪ್ರತಿಕ್ರಿಯೆಯಾಗಿ, ಸ್ಟೋರಿವೀವರ್ ಪ್ರಥಮ್ ಬುಕ್ಸ್‌ನ STEM ಲಿಟರಸಿ ಪ್ರೋಗ್ರಾಂ ಅನ್ನು ಬಿಡುಗಡೆಗೊಳಿಸಿತು. ಪುಸ್ತಕಗಳ ಮೂಲಕ STEM ವಿಷಯಾಧರಿತ ಹೊಸ ಅನ್ವೇಷಣೆಗಳನ್ನು ಪ್ರೋತ್ಸಾಹಿಸುವ ಉದ್ದೇಶವನ್ನು ಇದು ಹೊಂದಿತ್ತು. 1ರಿಂದ 5ನೇ ತರಗತಿ ಕೇಂದ್ರಿತವಾದ ಈ ಕಾರ್ಯಕ್ರಮ, ರಾಷ್ಟ್ರೀಯ ಪಠ್ಯಕ್ರಮಕ್ಕೆ ಪೂರಕವಾಗಿದ್ದು, ರಚನಾತ್ಮಕ ಲೆಸನ್ ಪ್ಲಾನ್‌ಗಳು, ಉತ್ತಮ ಚಟುವಟಿಕೆಗಳು, ಶಿಕ್ಷಕ ತರಬೇತಿ ಮಾದರಿಗಳ ಮೂಲಕ ಶಿಕ್ಷಕರಿಗೂ ಉತ್ತಮ ಸಂಪನ್ಮೂಲವಾಗಿವೆ. ಈ ಕಾರ್ಯಕ್ರಮ ಇಂಗ್ಲಿಷ್, ಹಿಂದಿ, ಮರಾಠಿ, ಉರ್ದು, ಒಡಿಯಾದಲ್ಲಿ ಲಭ್ಯವಿದೆ.

# ಪಯಣಿಸುವ ಕತೆಗಳು

ಪುಸ್ತಕಗಳು ದೇಶ, ಕಾಲಗಳ ಗಡಿ ಮೀರಿ ಮಕ್ಕಳನ್ನು ಪರವಶಗೊಳಿಸಬಲ್ಲವು. ಈ ವರ್ಷ, ನಮ್ಮ ಪಾಲುದಾರರ ಸಮುದಾಯವು ದೇಶ ಹಾಗೂ ವಿಶ್ವದಾದ್ಯಂತ ಓದಿನ ಸಂತಸ ಕಂಡುಕೊಳ್ಳುವಲ್ಲಿ ನೆರವಾಗಿವೆ.

## ಪ್ರಿಂಟ್ ಪುಸ್ತಕಗಳ ವಿತರಣೆ

9.3 ದಶಲಕ್ಷ ಪುಸ್ತಕಗಳು

6815
ಲೈಬ್ರರಿ-ಇನ್-ಎ-ಕ್ಲಾಸ್ ರೂಂ ಕಿಟ್‌ಗಳು

25 ರಾಜ್ಯಗಳು

4 ಕೇಂದ್ರಾಡಳಿತ ಪ್ರದೇಶಗಳು





















ಎಚ್‌ಸಿಎಲ್ ಫೌಂಡೇಷನ್‌ನಂತಹ ಕೆಲವು ಪಾಲುದಾರರ ಜೊತೆ ಸೇರಿ 89,300 ಪುಸ್ತಕಗಳನ್ನು ದೇಶಾದ್ಯಂತ 777 ಶಾಲಾ ಲೈಬ್ರರಿಗಳ ಮೂಲಕ 1,36,176 ವಿದ್ಯಾರ್ಥಿಗಳಿಗೆ ತಲುಪಿಸಿದ್ದೇವೆ. ನೋಯ್ಡಾದ ಜುಬಿಲೆಂಟ್ ಭಾರ್ತಿಯಾ ಫೌಂಡೇಷನ್ ಮೂಲಕ 11 ರಾಜ್ಯಗಳಾದ್ಯಂತ 240 ಹಳ್ಳಿಗಳ 10,00,000 ಮಕ್ಕಳಿಗೆ 82,400 ಪುಸ್ತಕಗಳ ಸಹಾಯದಿಂದ ಮಜವಾದ ಓದಿನ, ಕಲಿಕೆಯ ಅನುಭವ ನೀಡಿದೆವು. ಮುಂಬೈನ ಯುನೈಟೆಡ್ ವೇ ಅವರ Let's READ ಅಭಿಯಾನದ ಮೂಲಕ 11,540 ಅಲ್ಪಸಂಖ್ಯಾತ ಮಕ್ಕಳಿಗೆ 84,625 ಪುಸ್ತಕಗಳನ್ನು ಒದಗಿಸಿದ್ದೇವೆ. ಜೊತೆಗೆ ಅಸಿಫಾಬಾದ್‌ನ ಜಿಲ್ಲಾ ಪ್ರಜಾ ಪರಿಷತ್ ಮೂಲಕ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ನಮ್ಮ 353 ಹ್ಯಾಂಗಿಂಗ್ (ಗೋಡೆಗೆ ನೇತು ಹಾಕಬಹುದಾದ) ಲೈಬ್ರರಿ ಮಾದರಿಯಲ್ಲಿ 35,000 ಪುಸ್ತಕಗಳನ್ನು ನೀಡಿದ್ದೇವೆ.

ಇದಲ್ಲದೇ, 17000 ಫೀಟ್ ಫೌಂಡೇಷನ್‌ನಂತಹ ಸಂಸ್ಥೆಯ ಜೊತೆ ಸೇರಿ (ಲಡಾಖ್, ಸಿಕ್ಕಿಂ), ಸಮಗ್ರ ಶಿಕ್ಷಾ (ದಾದ್ರ-ನಗರ್ ಹವೇಲಿ, ದಮನ್-ದಿಯು), ನವ್ ಸಹಯೋಗ್ ಫೌಂಡೇಷನ್ (ಕರ್ನಾಟಕ), ಕೀ ಎಜುಕೇಷನ್ ಫೌಂಡೇಷನ್ (ಕರ್ನಾಟಕ), ಥಿಂಕ್ ಶಾರ್ಪ್ ಫೌಂಡೇಷನ್ (ಮಹಾರಾಷ್ಟ್ರ, ಗುಜರಾತ್, ಬಾಲಮಿತ್ರ ಫೌಂಡೇಷನ್ (ಆಂಧ್ರ ಪ್ರದೇಶ), ಜೆಸಿಬಿ ಲಿಟರೇಚರ್ ಫೌಂಡೇಷನ್ (ದೆಹಲಿ, ಹರಿಯಾಣ, ರಾಜಸ್ಥಾನ್, ಗುಜರಾತ್, ಮಹಾರಾಷ್ಟ್ರ), ವಾಣಿ ಪ್ರೆಸ್ (ಕರ್ನಾಟಕ), ಪೀಪಲ್ಸ್ ಆಕ್ಷನ್ ಫಾರ್ ನ್ಯಾಷನಲ್ ಇಂಟಿಗ್ರೇಷನ್ - PANI (ಉತ್ತರ ಪ್ರದೇಶ), ಆಜಾದ್ ಇಂಡಿಯಾ ಫೌಂಡೇಷನ್ (ಬಿಹಾರ್) ಮೂಲಕ ಸಹಸ್ರಾರು ಮಕ್ಕಳ ನವಿರಾದ ಓದಿಗೆ, ಕಲಿಕೆಗೆ ಉತ್ತೇಜನ ನೀಡಿದ್ದೇವೆ.

# ಕುತೂಹಲದ ಹರಿಕಾರರು



ಕೋವಿಡ್-19 ನಂತರದ ದಿನಗಳು ವಿಶೇಷವಾಗಿ ಮಕ್ಕಳ ಕಲಿಕೆ, ಅಭಿವೃದ್ಧಿಯನ್ನು ಸಮಗ್ರ ದೃಷ್ಟಿಯಿಂದ ನೋಡುವಂತೆ ಮಾಡಿವೆ. ಜಾಗತಿಕ ದಕ್ಷಿಣದ ಪರಿಕಲ್ಪನೆ ಹಿನ್ನೆಲೆಯಲ್ಲಿ ಕೋವಿಡ್ ಸಮಯ ಹಾಗೂ ನಂತರದ ದಿನಗಳ ದೃಷ್ಟಿಯಿಂದಲೂ ಭಾಷಾ ಪುಸ್ತಕಗಳಿಗೆ ಪ್ರಸ್ತುತತೆ ಎದುರಾಗಿರಬಹುದು. ಏಕೆಂದರೆ, ಈ ಹಂತದಲ್ಲಿ ದೂರಶಿಕ್ಷಣ ಕಲಿಕಾರ್ಥಿಗಳಿಗೆ ನೆರವಾಗುವುದು ದೊಡ್ಡ ಸವಾಲಾಗಿ ಬಿಟ್ಟಿದೆ. ಸರಳ ಇಂಗ್ಲಿಷ್ ಪುಸ್ತಕಗಳು ಸಹ ಸದ್ಯ ಹೆಚ್ಚು ಪ್ರಸ್ತುತವಾಗಿವೆ ಎನ್ನುತ್ತದೆ, ಕಲಿಕಾ ವ್ಯತ್ಯಾಸಗಳನ್ನು ಕುರಿತ ASER ವರದಿ.

ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) 2020 ಸಹ ಬಾಲವಾಡಿ ಅಥವಾ ಅಂಗನವಾಡಿಗಳಲ್ಲಿನ ಕಲಿಕಾ ಮಾಧ್ಯಮ ಮಾತೃಭಾಷೆಯಲ್ಲೇ ಇರಬೇಕು ಎಂದು ಶಿಫಾರಸು ಮಾಡುತ್ತದೆ. ಈ ಮೂಲಕ ಮಗುವಿನ ಕಲಿಕೆ, ಭಾಗವಹಿಸುವಿಕೆ ಜೊತೆಗೆ ಶಾಲೆಯಿಂದ ಹೊರಗುಳಿಯುವವರ ಸಂಖ್ಯೆಯೂ ಕಡಿಮೆಯಾಗಲಿದೆ ಎಂಬುದು ಶಿಫಾರಸ್ಸಿನ ಉದ್ದೇಶ. ಪ್ರಥಮ್ ಬುಕ್ಸ್ ಕೂಡ ಹೀಗೆ ಒಳಗೊಳ್ಳುವಿಕೆಯ ದೃಷ್ಟಿಯಿಂದ ಹಲವು ಭಾಷೆಗಳಲ್ಲಿ ಮುದ ನೀಡುವ ಚಿತ್ರಪುಸ್ತಕಗಳನ್ನು ಹೊರತಂದಿದೆ.

ಪ್ರತಿ ಮಗುವೂ ಮಾತೃಭಾಷೆಯಲ್ಲಿ ಓದಬೇಕೆಂಬ ವಾದ ಸಮ್ಮತವೇ. ಅದಕ್ಕಾಗಿಯೇ ಸಮುದಾಯದ ಭಾಷಾಂತರಕಾರರು ನಮ್ಮ ಪುಸ್ತಕಗಳನ್ನು ಕೊಲಾಮಿ, ಗೊಂಡಿ, ಪಾವ್ರಿ, ಕೊರ್ಕು ಮುಂತಾದ ಕಡಿಮೆ ಪರಿಚಿತ ಭಾಷೆಗಳಿಗೆ ಅನುವಾದಿಸಿದ್ದಾರೆ. ಈ ಮೂಲಕ ಆ ಸಮುದಾಯದ ಮಕ್ಕಳು ಮಾತೃಭಾಷೆಯಲ್ಲೆ ಕತೆಗಳನ್ನು ಓದುವ ಸಂತಸದ ಕ್ಷಣ ಸೃಷ್ಟಿಯಾಗಿದೆ.

ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯಲ್ಲಿ (ಸಿಐಐಎಲ್) ನಡೆದ 'ಭಾರತೀಯ ಭಾಷಾ ಉತ್ಸವ' ಕಾರ್ಯಕ್ರಮದಲ್ಲಿ 'ಭಾರತೀಯ ಭಾಷೆಗಳಲ್ಲಿ ಮಕ್ಕಳ ಸಾಹಿತ್ಯ' ಎಂಬ ವಿಷಯದ ಬಗ್ಗೆ ಮಾತನಾಡಲು ಪ್ರಥಮ್ ಬುಕ್ಸ್‌ಗೆ ಆಹ್ವಾನ ನೀಡಿತ್ತು.

## ಅಂಗನವಾಡಿ ಇಸಿಇ ಪ್ರಾಯೋಗಿಕ ಯೋಜನೆ

**10 ಅಂಗನವಾಡಿಗಳು,
134 ಮಕ್ಕಳು, 10 ವಾರಗಳು,
ದಿನಕ್ಕೆ 45ರಿಂದ 60 ನಿಮಿಷಗಳು,
25 ಪುಸ್ತಕಗಳು (ಕಥಾ ವಾಚನ,
ಚಟುವಟಿಕೆಗಳ ಸಹಿತ)**













ನಮ್ಮ ಕನ್ನಡ ಪುಸ್ತಕಗಳು ಇಸಿಇ ಓದಿನ ಪ್ರಾಯೋಗಿಕ ಕಾರ್ಯಕ್ರಮದ ಭಾಗವಾದವು. ಕರ್ನಾಟಕದ 10 ನಗರ ಹಾಗೂ ಗ್ರಾಮೀಣ ಅಂಗನವಾಡಿ ಕೇಂದ್ರಗಳಲ್ಲಿ ಕನ್ನಡದ ಕತೆಗಳನ್ನು ಬಳಸಿಕೊಳ್ಳಲಾಯಿತು. ಫಲಿತಾಂಶಗಳು ಅತ್ಯಂತ ಉತ್ತೇಜಕವಾಗಿದ್ದವು; ಮಕ್ಕಳ ವೈಯಕ್ತಿಕ ಡೇಟಾ ಪ್ರತಿಕ್ರಿಯೆಯಲ್ಲಿ ಗಮನಾರ್ಹ ಹೆಚ್ಚಳ ಕಂಡುಬಂದಿದೆ; ನಗರ-ಗ್ರಾಮೀಣ ಇಸಿಇ ಕೇಂದ್ರಗಳಲ್ಲಿ ನಮ್ಮ ಪುಸ್ತಕಗಳ ಮೂಲಕ ಭಾಷೆಯ ಕೌಶಲಗಳು, ಮುದ್ರಿತ ಪುಸ್ತಕಗಳ ಬಗ್ಗೆ ಮಾಹಿತಿ, ಗ್ರಹಿಕೆ ಹಾಗೂ ಧ್ವನಿ ಮಾದರಿ ಗುರುತಿಸುವಿಕೆಯಲ್ಲಿ ಉತ್ತಮ ಫಲಿತಾಂಶ ಕಂಡುಬಂದಿದೆ.

ಈ ಚಟುವಟಿಕೆಯ ನಂತರ ಮಕ್ಕಳು ತಾವಾಗಿಯೇ ಪುಸ್ತಕಗಳನ್ನು ಗುರುತಿಸುವುದು, ಕೈಗೆತ್ತಿಕೊಂಡು ಓದುವ ವಿಷಯದಲ್ಲಿ ಕಾರ್ಯಕ್ರಮದ ಆರಂಭಕ್ಕಿಂತ ಹೆಚ್ಚು ಚಟುವಟಿಕೆಯಿಂದ ಪುಸ್ತಕಗಳನ್ನು ಆಯ್ಕೆ ಮಾಡಿಕೊಂಡು ಓದುವುದನ್ನು ರೂಢಿಸಿಕೊಂಡರು.



# ಸಮುದಾಯದ ಹರಿಕಾರರು









ಕಳೆದೆರಡು ವರ್ಷಗಳ ನಂತರ 'ಒಂದು ದಿನ, ಒಂದು ಕತೆ' ಅಭಿಯಾನವು ಮತ್ತೆ ಎಂದಿನಂತೆ ತನ್ನ ಆಫ್‌ಲೈನ್ ಮಾದರಿಯಲ್ಲೇ ಪುನರಾರಂಭಗೊಂಡಿದ್ದು 10ನೇ ವರ್ಷದ ಅಭಿಯಾನಕ್ಕೆ ಹೇಳಿ ಮಾಡಿಸಿದಂತಿತ್ತು. ಕೋವಿಡ್‌ನಿಂದಾಗಿ ಈ ಹಿಂದಿನ ಎರಡು ವರ್ಷಗಳೂ ಈ ಅಭಿಯಾನ ಆನ್‌ಲೈನ್‌ನಲ್ಲೇ ನಡೆದಿತ್ತು.

ಪ್ರಿಯಾ ಕುರಿಯನ್ ಅವರ *ಸುಂದರಿ ಕಾಣೆಯಾಗಿದ್ದಾಳೆ*, ಕವಿತಾ ಪುನ್ನಿಯಮೂರ್ತಿ ಬರೆದು ಏಕ್ತಾ ಭಾರ್ತಿ ಚಿತ್ರಿಸಿರುವ *ವಟರ್* ಪುಸ್ತಕಗಳನ್ನು ದೇಶಾದ್ಯಂತ ನಮ್ಮ ಚಾಂಪಿಯನ್‌ಗಳಿಗೆ ಕಳಿಸಿಕೊಟ್ಟೆವು. ದೇಶಾದ್ಯಂತ ಅಂದರೆ ಮೆಟ್ರೊ ನಗರಗಳಲ್ಲದೇ ಬಿಹಾರದ ಠಾಕೂರ್‌ಗಂಜ್, ಮಹಾರಾಷ್ಟ್ರದ ನಾಸಿಕ್, ತಮಿಳುನಾಡಿನ ಕರೈಕುಡಿ, ಛತ್ತೀಸ್‌ಘಡದ ಸುಕ್ಮಾವರೆಗೆ ಈ ಅಭಿಯಾನದ ಪುಸ್ತಕಗಳು ತಲುಪಿದವು. ಈ ಕಥಾ ವಾಚನಗಳು ಗೊಂಡಿ, ಸಂತಾಲಿ ಸೇರಿದಂತೆ 25 ಭಾಷೆಗಳಲ್ಲಿ ನಡೆದವು, 2 ಲಕ್ಷಕ್ಕೂ ಹೆಚ್ಚು ಮಕ್ಕಳು ಈ ಕಥಾ ವಾಚನದ ಮುದ ಅನುಭವಿಸಿದ್ದಾರೆ.

ಕಳೆದ 9 ವರ್ಷಗಳಂತೆಯೇ ಈ ವರ್ಷದ ಅಭಿಯಾನವು ಅಭೂತಪೂರ್ವ ಯಶಸ್ಸು ಕಂಡಿತು. ಅಭಿಯಾನಕ್ಕಾಗಿ ನಮ್ಮೊಂದಿಗೆ ಕೈ ಜೋಡಿಸಿದ 30,000 ಚಾಂಪಿಯನ್‌ಗಳು ಒಟ್ಟು 13,000 ಕಥಾ ವಾಚನಗಳನ್ನು ಶಾಲೆ, ಲೈಬ್ರರಿ, ಮನೆ, ಪುಸ್ತಕ ಮಳಿಗೆಗಳು ಸೇರಿದಂತೆ ಇನ್ನಿತರೆ ಅನೇಕ ಸ್ಥಳಗಳಲ್ಲಿ ನಡೆಸಿದ್ದಾರೆ.

ಪ್ರಿಯಾ ಕುರಿಯನ್ ತಮ್ಮ *ಸುಂದರಿ ಕಾಣೆಯಾಗಿದ್ದಾಳೆ* ಪುಸ್ತಕವನ್ನು ಬೆಂಗಳೂರಿನ ಹಳೆಯ ಪುಸ್ತಕ ಮಳಿಗೆಗಳ ಪೈಕಿ ಒಂದಾಗಿರುವ ಬುಕ್ ವರ್ಮ್‌ನಲ್ಲಿ ವಾಚಿಸಿ, ಚಿತ್ರ ಬರೆಸುವ ಚಟುವಟಿಕೆ ಹಮ್ಮಿಕೊಂಡರು. ಕಥಾ ವಾಚನ ಪ್ರವೀಣೆಯಾಗಿರುವ ಪ್ರಿಯಾ ಮುತ್ತುಕುಮಾರ್, ಬೆಂಗಳೂರಿನ ಸ್ವಾಭಿಮಾನ್ ಸಮುದಾಯ ಲೈಬ್ರರಿಯಲ್ಲಿ ತಮ್ಮ ಅತ್ಯದ್ಭುತ ಹಾಸ್ಯಪ್ರಜ್ಞೆಯಿಂದ *ವಟರ್* ಪ್ರಸ್ತುತಪಡಿಸಿ, ಮಕ್ಕಳನ್ನು ರಂಜಿಸಿದರು. ವಾಚನದ ನಂತರ ಮುಖವಾಡ ಮಾಡುವ ಚಟುವಟಿಕೆಯನ್ನು ಏರ್ಪಡಿಸಲಾಗಿತ್ತು. ಮಧ್ಯಭಾರತದ ಬುಡಕಟ್ಟು ಸಮುದಾಯಗಳಲ್ಲಿ ಮಾತ್ರ ಮಾತನಾಡುವ, ಬಹುತೇಕ ಅಳಿನಂಚಿನಲ್ಲಿರುವ ಗೊಂಡಿ ಭಾಷೆಯಲ್ಲಿ ಕಥಾ ವಾಚನ ನಡೆಸಲು ಶಿಕ್ಷಾರ್ಥ್ ಟ್ರಸ್ಟಿನ ಸ್ವಯಂಸೇವಕರು ಕೈ ಜೋಡಿಸಿದ್ದು ವಿಶೇಷವಾಗಿತ್ತು.

# ಒಳ್ಳೆಯದರ ಹರಿಕಾರರು

PRATHAM BOOKS
donate-a-book











ಮಕ್ಕಳು, ಎನ್‌ಜಿಒಗಳು ಅಗತ್ಯವಿರುವ ಶಾಲೆಗಳೊಂದಿಗೆ ನಮ್ಮ ಧ್ಯೇಯದೊಂದಿಗೆ ಹೊಂದಿಕೊಳ್ಳುವ ವ್ಯಕ್ತಿಗಳನ್ನು ಸಂಪರ್ಕಿಸುವ ನಮ್ಮ ಬದ್ಧತೆಯನ್ನು ಮುಂದುವರಿಸಿದೆವು. ಇದಕ್ಕೆ ನಿದರ್ಶನವೆಂಬಂತೆ, ರಾಷ್ಟ್ರೀಯ ಓದುವ ದಿನ, ದಾನ್ ಉತ್ಸವ್, ಅಂತಾರಾಷ್ಟ್ರೀಯ ಮಾತೃಭಾಷಾ ದಿನದಂತಹ ವಿವಿಧ ಸಂದರ್ಭಗಳಲ್ಲಿ ಸಕಾರಾತ್ಮಕ ಪರಿಣಾಮವನ್ನು ಸೃಷ್ಟಿಸುವಲ್ಲಿ ಡೊನೇಟ್-ಎ-ಬುಕ್ ವೇದಿಕೆಯು ಗಮನಾರ್ಹ ಪ್ರಗತಿ ಸಾಧಿಸಿದೆ. ವಿಶೇಷಚೇತನರಿಗಾಗಿ ನಡೆದ ಮಣಿಪುರದ ಮಾಲ್ಸಾವ್ಮ್ ಕಾರ್ಯಕ್ರಮದಿಂದ ಉತ್ತರ ಪ್ರದೇಶದ ರೈತರ ಮಕ್ಕಳಿಗಾಗಿ, ಕೊಡಗು, ಮೈಸೂರು ಜಿಲ್ಲೆಗಳಲ್ಲಿರುವ ನಿರಾಶ್ರಿತ ಕೇಂದ್ರದ ಮಕ್ಕಳವರೆಗೆ ನಮ್ಮ ಪ್ರಯತ್ನಗಳು ವೈವಿಧ್ಯಮಯ ಫಲಾನುಭವಿಗಳಿಗೆ ವಿಸ್ತರಿಸಿವೆ. ಇದಲ್ಲದೇ, ನಮ್ಮ ಕಾರ್ಯಕ್ರಮಗಳು ಸಾಕಷ್ಟು ಪ್ರದೇಶಗಳಲ್ಲಿ ಸರ್ಕಾರಿ ಶಾಲೆ ಮಕ್ಕಳನ್ನು ಅಂದರೆ ಕರ್ನಾಟಕ, ಮೇಘಾಲಯ, ಹಿಮಾಚಲ ಪ್ರದೇಶ, ದೆಹಲಿ, ಸಿಕ್ಕಿಂ, ಮಣಿಪುರ ಸೇರಿ ಇನ್ನೂ ಹಲವು ಕಡೆ ವ್ಯಾಪಿಸಿವೆ.

ಈ ಸಾಹಸಗಳು ಪುಸ್ತಕ ವಿತರಣೆಗೆ ನೆರವಾಗುವುದಲ್ಲದೇ ಅಗತ್ಯವಿರುವವರು, ಬೆಂಬಲ ನೀಡಲು ಉತ್ಸುಕರಾಗಿರುವವರ ನಡುವಿನ ಅರ್ಥಪೂರ್ಣ ಸಂಬಂಧಗಳನ್ನೂ ಒದಗಿಸಿವೆ. ಈ ಸಂಪರ್ಕಗಳನ್ನು ಸುಗಮಗೊಳಿಸುವ ಮೂಲಕ, ವಿವಿಧ ಹಿನ್ನೆಲೆ, ಭೌಗೋಳಿಕ ಪ್ರದೇಶಗಳಲ್ಲಿರುವ ಮಕ್ಕಳಿಗೆ ಶೈಕ್ಷಣಿಕ ಅವಕಾಶಗಳನ್ನು ಹೆಚ್ಚಿಸುವಲ್ಲಿ ನಾವು ಪ್ರಮುಖ ಪಾತ್ರ ವಹಿಸಿದ್ದೇವೆ.

ದಾನ್ ಉತ್ಸವ್‌ದ ನಮ್ಮ ಎರಡನೇ ಆವೃತ್ತಿಯಲ್ಲಿ, 28,000ಕ್ಕೂ ಹೆಚ್ಚು ಪುಸ್ತಕಗಳನ್ನು ಕಾರ್ಪೊರೇಟ್ ಬೆಂಬಲಿಗರಾದ ಫಸ್ಟ್ ಸೋರ್ಸ್, ಮಾಸ್ಟೆಕ್ ಅಲ್ಲದೇ ಇನ್ನಿತರ ವೈಯಕ್ತಿಕ ದಾನಿಗಳ ಮೂಲಕ ತಲುಪಿಸಲಾಗಿದೆ.

ಮಕ್ಕಳಿಗೆ ಮುದ ನೀಡುವ ಪುಸ್ತಕಗಳನ್ನು ಒದಗಿಸಲು ಕೊಡುಗೆ ನೀಡುವ ಡೊನೇಟ್-ಎ-ಬುಕ್‌ನ ಪ್ರಭಾವವು ದೂರಗಾಮಿಯೂ ಹೃದಯಸ್ಪರ್ಶಿಯೂ ಆಗಿದೆ.

"ದಾನಿಗಳಿಂದ ನಿಜಕ್ಕೂ ದೊಡ್ಡ ಬದಲಾವಣೆಯಾಗಿದೆ. ಅವರಿಲ್ಲದೇ, ನಾವು ಖಂಡಿತವಾಗಿಯೂ ಸಮರ್ಥವಾದ ಲೈಬ್ರರಿಗಳನ್ನು ಸ್ಥಾಪಿಸಲು ಸಾಧ್ಯವಾಗುತ್ತಿರಲಿಲ್ಲ. ಸರಿಯಾದ ಸಮಯಕ್ಕೆ ಎಲ್ಲವೂ ಕೂಡಿಬಂದಿದ್ದಕ್ಕೆ ನಾನು ತುಂಬಾ ಋಣಿಗಳಾಗಿದ್ದೇವೆ."

*ದೀಪಿಕಾ ಅಪ್ಪಯ್ಯ, ಸಂಸ್ಥಾಪಕರು, ಮೈಂಡ್ ಅಂಡ್ ಮ್ಯಾಟರ್*

ಕ್ಲಾಸ್ ರೂಮ್‌ಗಳಲ್ಲಿ ಈಗ ಮುಂಚೆಗಿಂತ ಲವಲವಿಕೆ ಹೆಚ್ಚಿದೆ. ಮಕ್ಕಳು ಒಡನಾಡುವ ಹಾಗೂ ತೊಡಸಿಕೊಳ್ಳುವ ವಿಷಯದಲ್ಲಿ ಸಾಕಷ್ಟು ಪರಿವರ್ತನೆಯಾಗಿದೆ.

*ಆಶಿಶ್ ಶ್ರೀವಾಸ್ತವ, ಸಂಸ್ಥಾಪಕರು, ಶಿಕ್ಷಾರ್ಥ್*





ಸೋನಮ್ ಯಾಂಗ್ಜೋಮ್ ಹಿಮಾಚಲ ಪ್ರದೇಶದ ಸ್ಪಿತಿ ಕಣಿವೆಯಲ್ಲಿರುವ ತನ್ನ ಹಳ್ಳಿಯಲ್ಲಿ ಮೊದಲ ಗ್ರಂಥಾಲಯವನ್ನು ನಿರ್ಮಿಸಿದರು. ಪುಸ್ತಕಗಳು, ಅಂತರ್ಜಾಲದ ಲಭ್ಯತೆಯ ಕೊರತೆಯಿಂದಾಗಿ ಇಲ್ಲಿ ಮಕ್ಕಳು, ವಯಸ್ಕರಲ್ಲಿ ಕಲಿಕೆಯ ಸಾಮರ್ಥ್ಯವು ಸೀಮಿತವಾಗಿದೆ. ಆದರೆ, ತಮ್ಮ ಅಭಿಯಾನದ ಮೂಲಕ ಸಂಗ್ರಹಿಸಿದ ಹಣವನ್ನು ಬಳಸಿಕೊಂಡು, ಸೋನಮ್ ತನ್ನ ಹಳ್ಳಿಯ ಸ್ನೇಹಿತರೊಂದಿಗೆ, ಪಿನ್ ಕಣಿವೆಯ ಒಂದು ಸಣ್ಣ ಗ್ರಾಮವಾದ ಖಾರ್‌ನಲ್ಲಿ ಗ್ರಂಥಾಲಯವನ್ನು ಸ್ಥಾಪಿಸಿದರು. ಈ ಹಳ್ಳಿಯ, ಹತ್ತಿರದ ಹಳ್ಳಿಗಳ ಮಕ್ಕಳು ಯೋಚಿಸಲು, ಕಲ್ಪಿಸಿಕೊಳ್ಳಲು ಪ್ರೇರೇಪಿಸುವ, ತಮ್ಮ ಬದುಕನ್ನು ಹೋಲಿಸಿ ಕೊಳ್ಳಬಹುದಾದ ಆಕರ್ಷಕ ಪುಸ್ತಕಗಳು ಅವರಿಗೆ ಲಭ್ಯವಾಗಬೇಕೆಂದು ಅವರು ಆಶಿಸುತ್ತಾರೆ.

ದಾನ್ ಉತ್ಸವ್ ಸಮಯದಲ್ಲಿ ವಿಶೇಷಚೇತನರಿಗಾಗಿ ಸೆಂಟರ್ ಫಾರ್ ಕಮ್ಯುನಿಟಿ ಇನಿಷಿಯೇಟಿವ್ ವತಿಯಿಂದ ನಡೆದ ದಿ ಮಾಲ್ಸಾವ್ಮ್ ಇನಿಷಿಯೇಟಿವ್ ಸ್ಕೂಲ್ ಮೂಲಕ ಆಕರ್ಷಕ ಪುಸ್ತಕಗಳನ್ನು ಒದಗಿಸಲು ದಾನಿಗಳ ನೆರವನ್ನು ಬಳಸಿಕೊಳ್ಳಲಾಯಿತು. ಪ್ರತಿ ಮಗುವಿನ ವಯೋಮಾನಕ್ಕೆ ತಕ್ಕಂತೆ ಪುಸ್ತಕವನ್ನು ಮನೆಗೆ ತೆಗೆದುಕೊಂಡು ಹೋಗುವಂತೆ ನೀಡಲಾಯಿತು. ಇದರಿಂದ ಬೇರೆ ಬೇರೆ ಹಿನ್ನೆಲೆ ಹಾಗೂ ಆರ್ಥಿಕ ಸಾಮರ್ಥ್ಯವುಳ್ಳ ತಮ್ಮ ಕುಟುಂಬಗಳ ಜೊತೆ ಓದಿನ ಶಕ್ತಿಯನ್ನು ಮಕ್ಕಳೇ ಹಂಚಿಕೊಳ್ಳುವುದು ಸಾಧ್ಯವಾಯಿತು.

**ಡೊನೇಟ್-ಎ-ಬುಕ್‌ನ ಕ್ರೌಡ್ ಫಂಡಿಂಗ್ ಅಭಿಯಾನಗಳ ಮೂಲಕ ಶಾಲೆ, ಸಂಸ್ಥೆಗಳಿಗಾಗಿ 100ಕ್ಕೂ ಹೆಚ್ಚು ಲೈಬ್ರರಿಗಳ ಸ್ಥಾಪನೆ**

**55,000ಕ್ಕೂ ಹೆಚ್ಚು ಪುಸ್ತಕಗಳು ಜೊತೆಗೆ 300ಕ್ಕೂ ಹೆಚ್ಚು ಎಲ್‌ಐಸಿ ಕಿಟ್‌ಗಳ ವಿತರಣೆ**

**50ಕ್ಕೂ ಹೆಚ್ಚು ಪಟ್ಟಣ, ನಗರಗಳ 2.3 ಲಕ್ಷ ಮಕ್ಕಳಿಗೆ ಅನುಕೂಲ**

**700ಕ್ಕೂ ಹೆಚ್ಚು ಅನನ್ಯ ದಾನಿಗಳು**

# ದಾನಿಗಳು

## 2022-23ರ ವೈಯಕ್ತಿಕ ದಾನಿಗಳು

ನೀವು ಸಹ ನಮ್ಮೊಂದಿಗೆ ಪಾಲುದಾರರಾಗಿ ಓದಿನ ಸಂತಸ ಹಂಚಲು ಬಯಸುವಿರಾದರೆ, grants@prathambooks.orgಗೆ ಇಮೇಲ್ ಕಳಿಸಿ.

# ಆರ್ಥಿಕ ವರದಿ

**Pratham Books**

**Balance sheet as at March 31, 2023**

*(Amount in Rupees)*

| Particulars | Sch No. | As at March 31, 2023 Amount | As at March 31, 2022 Amount |
|---|---|---|---|
| **Liabilities** | | | |
| Corpus Fund | 1 | 10,11,68,543 | 8,65,63,766 |
| Specified Fund | 2 | 5,03,01,352 | 7,17,35,307 |
| Current Liabilities | 3 | 1,55,66,256 | 1,82,79,129 |
| Provisions | 4 | 41,07,473 | 29,40,689 |
| Other advances | 5 | 6,20,586 | 6,91,391 |
| **Total** | | **17,17,64,209** | **18,02,10,282** |
| **Assets** | | | |
| Fixed Assets | 6 | 24,41,933 | 22,51,602 |
| Deposits | 7 | 9,63,56,774 | 10,08,13,996 |
| Debtors | 8 | 29,94,427 | 68,26,803 |
| Loans and advances | 9 | 10,57,771 | 17,18,099 |
| Stock of Books | | 63,92,040 | 77,05,011 |
| Cash in Hand | | 13,440 | 8,740 |
| Cash at Bank | 10 | 5,59,18,084 | 5,56,29,623 |
| Specified Fund Receivable | 11 | 2,60,003 | - |
| Other Current Assets | 12 | 63,29,737 | 52,56,407 |
| **Total** | | **17,17,64,209** | **18,02,10,282** |
| Significant Accounting Policies and notes to accounts | 30 | | |

**for Pratham Books**

R Sriram
Chairperson

Suzanne Singh
Trustee

Bengaluru
September 21, 2023

As per our report of even date
**for Singhvi Dev & Unni LLP**
**Chartered Accountants**
Firm Reg No 003867S/ S200358

Shashi Kumar H D
Partner
Membership No.: 235431
UDIN: 23235431BGQRTD3650

Bengaluru
September 21, 2023

**Pratham Books**

**Income & Expenditure for the year ended March 31, 2023**

*(Amount in Rupees)*

| Particulars | Sch No. | As at March 31, 2023 Amount | As at March 31, 2022 Amount |
|---|---|---|---|
| **Income** | | | |
| Sale of Books | 13 | 7,22,51,678 | 7,04,51,825 |
| Donations received | 14 | 79,73,670 | 70,22,690 |
| Other Income | 15 | 76,56,613 | 86,08,003 |
| Income from Funds | 16 | 7,96,43,198 | 10,17,84,589 |
| **Total (A)** | | **16,75,25,159** | **18,78,67,106** |
| **Expenditure** | | | |
| Book Development Expenses | 17 | 2,80,32,882 | 1,22,98,263 |
| Selling & Administrative Expenses | 18 | 1,94,58,435 | 1,85,68,538 |
| Staff Expenses | 19 | 2,47,53,402 | 2,43,93,196 |
| Promotional Expenses | 20 | 3,94,861 | 5,06,838 |
| Research & Evaluation Expenses | | - | - |
| Depreciation | 6 | 6,37,604 | 5,82,825 |
| Fund Expenditure | 21 | 10,06,12,911 | 10,11,87,604 |
| **Total (B)** | | **17,38,90,094** | **15,75,37,265** |
| **Excess of Income over expenditure (A-B)** | | (63,64,935) | 3,03,29,841 |
| **Add:** | | | |
| **Opening Balance in Funds** | | | |
| Opening Balance in Corpus Fund | | 8,65,63,766 | 5,68,30,909 |
| Opening Balance in Specified Fund | | 7,17,35,307 | 7,15,18,870 |
| **Balance of Funds after appropriations** | | | |
| Corpus Fund | | 10,11,68,543 | 8,65,63,766 |
| Specified Fund | | 5,03,01,352 | 7,17,35,307 |
| **Total balance in Funds** | | **15,14,69,895** | **15,82,99,073** |
| Significant Accounting Policies and notes to accounts | 30 | | |

**for Pratham Books**

R Sriram
Chairperson

Suzanne Singh
Trustee

Bengaluru
September 21, 2023

As per our report of even date
**for Singhvi Dev & Unni LLP**
**Chartered Accountants**
Firm Reg No 003867S/ S200358

Shashi Kumar H D
Partner
Membership No.: 235431
UDIN: 23235431BGQRTD3650

Bengaluru
September 21, 2023

**Pratham Books**

**Receipts and Payments account for the year ended March 31, 2023**

*(Amount in Rupees)*

| Particulars | Sch no. | Year ended March 31, 2023 Amount | Year ended March 31, 2022 Amount |
|---|---|---|---|
| **Receipts** | | | |
| Balance brought forward | | | |
| - Cash on hand | | 8,740 | 12,859 |
| - Cash at bank | | 5,56,29,623 | 3,23,86,168 |
| Sale of books | 22 | 7,60,21,404 | 7,11,27,960 |
| Donations | 23 | 79,73,670 | 70,22,690 |
| Other Income | 24 | 66,96,425 | 75,31,032 |
| Specified Funds | 25 | 7,95,20,218 | 10,17,84,589 |
| Fixed Deposits - Withdrawn | | 11,57,24,894 | 9,15,06,369 |
| Earnest Money Refund Received | | 72,141 | 3,13,880 |
| Income Tax Refund - Received (TDS) | | 13,25,281 | 10,60,810 |
| **Total** | | **34,29,72,396** | **31,27,46,357** |
| **Payments** | | | |
| Book Development Expenses | 26 | 3,06,72,715 | 1,12,84,777 |
| Selling, Administrative Expenses and Promotional Expenses | 27 | 1,97,05,301 | 1,88,72,827 |
| Staff Expenses | 28 | 2,35,82,788 | 2,38,49,771 |
| Fund Expenditure | 29 | 9,88,73,433 | 10,39,09,421 |
| Fixed Assets Purchased | | 8,27,935 | 2,11,280 |
| Fixed Deposits | | 11,12,88,813 | 9,88,16,981 |
| Gratuity- LIC Policy | | 13,14,641 | - |
| Specific Grant Balance Refund | | 7,24,246 | 65,797 |
| Earnest Money/Security Deposit | | 51,000 | 97,141 |
| Balance carried forward | | | |
| - Cash on hand | | 13,440 | 8,740 |
| - Cash at bank | | 5,59,18,084 | 5,56,29,623 |
| **Total** | | **34,29,72,396** | **31,27,46,358** |
| Significant Accounting Policies and notes to accounts | 30 | - | |

**for Pratham Books**

R Sriram
Chairperson

Suzanne Singh
Trustee

Bengaluru
September 21, 2023

As per our report of even date
**for Singhvi Dev & Unni LLP**
**Chartered Accountants**
Firm Reg No 003867S/ S200358

Shashi Kumar H D
Partner
Membership No.: 235431
UDIN: 23235431BGQRTD3650

Bengaluru
September 21, 2023

# ಟ್ರಸ್ಟಿಗಳ ಮಂಡಳಿ

| ಹೆಸರು | ಸ್ಥಾನ | ಭಾಗವಹಿಸಿದ ಮಂಡಳಿಯ ಸಭೆಗಳ ಸಂಖ್ಯೆ | ಸಂಭಾವನೆ / ಟ್ರಸ್ಟಿಗಳು ಪಡೆದ ಖರ್ಚು ವೆಚ್ಚ |
|---|---|---|---|
| 1. ಅಶೋಕ್ ಕಾಮತ್ | ಟ್ರಸ್ಟಿ | 4 | ಶೂನ್ಯ |
| 2. ಹರಿತ್ ನಾಗ್‌ಪಾಲ್ | ಟ್ರಸ್ಟಿ | 2 | ಶೂನ್ಯ |
| 3. ಎಂ ಎಸ್ ಶ್ರೀರಾಮ್ | ಟ್ರಸ್ಟಿ | 4 | ಶೂನ್ಯ |
| 4. ಪರ್ವೀನ್ ವರ್ಮಾ | ಟ್ರಸ್ಟಿ | 0 | ಶೂನ್ಯ |
| 5. ಆರ್ ಶ್ರೀರಾಮ್ | ಚೇರ್‌ಪರ್ಸನ್ ಮತ್ತು ಕಾರ್ಯನಿರ್ವಾಹಕ ಟ್ರಸ್ಟಿ | 4 | ಶೂನ್ಯ |
| 6. ರೇಖಾ ಮೆನನ್ | ಟ್ರಸ್ಟಿ | 0 | ಶೂನ್ಯ |
| 7. ಶ್ರೀಕಾಂತ್ ನಾದಮುನಿ | ಟ್ರಸ್ಟಿ | 2 | ಶೂನ್ಯ |
| 8. ಸುರ್ಝೀನ್ ಸಿಂಗ್ | ಟ್ರಸ್ಟಿ | 2 | ಶೂನ್ಯ |

ಟ್ರಸ್ಟಿಗಳು ವರ್ಷವಿಡೀ ಸಂಸ್ಥೆಯ ವಿವಿಧ ಅಂಶಗಳೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಂಡು ಬೆಂಬಲಿಸುತ್ತಾರೆ, ಔಪಚಾರಿಕ ಮಂಡಳಿಯ ಸಭೆಗಳಲ್ಲದೇ ಅಗತ್ಯವಿದ್ದಲ್ಲಿ ತಮ್ಮ ಪಾಲ್ಗೊಳ್ಳುವಿಕೆಯನ್ನು ವಿಸ್ತರಿಸುತ್ತಾರೆ.

**ಅಶೋಕ್ ಕಾಮತ್** ಪ್ರಥಮ್ ಬುಕ್ಸ್ ಪ್ರಾರಂಭವಾದಾಗಿನಿಂದ ಸಹ-ಸ್ಥಾಪಕ ಟ್ರಸ್ಟಿಯಾಗಿ ಸಂಸ್ಥೆಯ ಪ್ರಮುಖ ಭಾಗವಾಗಿದ್ದಾರೆ. ಅವರು ಅಕ್ಷರ ಫೌಂಡೇಶನ್ ಅನ್ನು ಮುನ್ನಡೆಸುತ್ತಿದ್ದಾರೆ. ಭಾರತದಲ್ಲಿ ಶಿಕ್ಷಣ ಅಸಮಾನತೆಗಳನ್ನು ಪರಿಹರಿಸುವ ಪ್ರಯತ್ನಗಳಲ್ಲಿ ಆಳವಾಗಿ ತೊಡಗಿಸಿಕೊಂಡಿದ್ದಾರೆ. ಅಭಿವೃದ್ಧಿಯ ಬದಲಾವಣೆಗೆ ಸಮರ್ಥನೀಯ ಮಾದರಿಗಳನ್ನು ನಿರ್ಮಿಸಲು, ಚಾಲನೆ ನೀಡಲು ರಾಜ್ಯದ ನಾಯಕತ್ವದಿಂದ ತಳಮಟ್ಟದವರೆಗೆ ಸರ್ಕಾರದ ಎಲ್ಲಾ ಹಂತಗಳೊಂದಿಗೆ ಹೇಗೆ ತೊಡಗಿಸಿಕೊಳ್ಳಬೇಕು ಎಂದು ಅಶೋಕ್ ತಿಳಿದಿದ್ದಾರೆ.

**ಹರಿತ್ ನಾಗ್‌ಪಾಲ್** ನಮ್ಮ ಧ್ಯೇಯೋದ್ದೇಶವನ್ನು ಮುಂದುವರಿಸಲು ನೆಲದ ವಾಸ್ತವತೆ, ಬಳಕೆದಾರರ ತಿಳಿವಳಿಕೆಯೊಂದಿಗೆ ನಮ್ಮ ವ್ಯಾಪ್ತಿಯನ್ನು ಬೆಸೆಯಲು ಮುಖ್ಯವಾಹಿನಿಯ ವ್ಯಾಪಾರ ತಿಳಿವಳಿಕೆ, ಭಾರತದಾದ್ಯಂತ ಕಾರ್ಯಾಚರಣೆಗಳ ಅನುಭವವನ್ನು ತರುತ್ತಾರೆ.

**ಪರ್ವೀನ್ ವರ್ಮಾ** ಮಕ್ಕಳ ಸಮಸ್ಯೆಗಳ ಕುರಿತು ಕೆಲಸ ಮಾಡುವ CRY ಅನ್ನು ಮುನ್ನಡೆಸುತ್ತಾರೆ. ಇವರ ಕೆಲಸ ಮಕ್ಕಳ ಅಗತ್ಯಗಳ ಬಗ್ಗೆ ಒಳನೋಟ, ತಿಳಿವಳಿಕೆ; ಮಕ್ಕಳನ್ನು ತಲುಪುವ ಬಗೆ ಹಾಗೂ ಪರಿಣಾಮಕಾರಿ ಕೆಲಸದ ಬಗ್ಗೆ ಒಳನೋಟಗಳನ್ನು ನೀಡುತ್ತದೆ.

**ರೇಖಾ ಮೆನನ್** ಸ್ಥಾಪಕ ಟ್ರಸ್ಟಿಗಳಲ್ಲಿ ಒಬ್ಬರು. ಎರಡು ಉದ್ದೇಶಗಳನ್ನು ಸಂಯೋಜಿಸುವ ಕಾರ್ಪೊರೇಟ್‌ನಂತೆ ಸಂಘಟಿತರಾಗಿದ್ದಾರೆ. ಯಾವಾಗಲೂ ವಿಶಾಲ ದೃಷ್ಟಿಕೋನ, ದೊಡ್ಡ ಪ್ರಭಾವದ ಬಗ್ಗೆ ಯೋಚಿಸುತ್ತಾರೆ.

**ಎಂ ಎಸ್ ಶ್ರೀರಾಮ್** ಅಧ್ಯಾಪಕ ಮತ್ತು ಲೇಖಕ. ದೊಡ್ಡ ವಿನ್ಯಾಸ, ಪರಿಕಲ್ಪನೆಯ ಸಮಸ್ಯೆಗಳೊಂದಿಗೆ ಟ್ರಸ್ಟ್ ಅನ್ನು ನಿರ್ವಹಿಸುವ ಪ್ರಾಯೋಗಿಕ ಅಂಶಗಳನ್ನು ಸಂಯೋಜಿಸುತ್ತಾರೆ.

**ಶ್ರೀಕಾಂತ್ ನಾದಮುನಿ** ತಂತ್ರಜ್ಞಾನವನ್ನು ಮಕ್ಕಳ ಸನ್ನಿವೇಶಕ್ಕೆ ಹೇಗೆ ಸುರಕ್ಷಿತವಾಗಿ ಅಳವಡಿಸಿಕೊಳ್ಳಬಹುದು ಎನ್ನುವುದರ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದಾರೆ. ಗಡಿಪ್ರದೇಶಗಳಲ್ಲಿ ಕೆಲಸ ಮಾಡಿದ್ದಾರೆ. ನವೀನ ಅಪ್ಲಿಕೇಶನ್‌ಗಳ ಎಲ್ಲಾ ಅಂಶಗಳನ್ನು ಪರಿಹರಿಸಲು ತಂತ್ರಜ್ಞಾನದ ಮೂಲಕ ನೇರವಾಗಿ ನೆರವು ನೀಡುತ್ತಾರೆ.

**ಸುರ್ಝೀನ್ ಸಿಂಗ್** ಅಧ್ಯಕ್ಷರಾಗಿ ಮತ್ತು ಮ್ಯಾನೇಜಿಂಗ್ ಟ್ರಸ್ಟಿಯಾಗಿ ಸಂಸ್ಥೆಯನ್ನು ಹಲವು ವರ್ಷಗಳ ಕಾಲ ಮುನ್ನಡೆಸಿದ್ದಾರೆ. ಪ್ರಮುಖ ಕಾರ್ಯತಂತ್ರದ ನಿರ್ಧಾರಗಳೊಂದಿಗೆ ಸ್ಟೋರಿವೀವರ್ ಅನ್ನು ಪರಿಚಯಿಸಿದರು. ಸಂತೋಷಕರ ಪುಸ್ತಕಗಳೊಂದಿಗೆ ಕೊನೆಯ ಮಗುವನ್ನೂ ಸಹ ತಲುಪಲು ನಿರಂತರ ಉತ್ಸಾಹದೊಂದಿಗೆ ದೃಷ್ಟಿಯನ್ನು ಮಿಷನ್ ಮೇಲೆ ಕೇಂದ್ರೀಕರಿಸಿದ್ದಾರೆ.

**ಆರ್ ಶ್ರೀರಾಮ್** ಅವರು ಪುಸ್ತಕಗಳ ಮಾಂತ್ರಿಕ, ಆನಂದದಾಯಕ ಓದುವಿಕೆಗೆ ಪ್ರಜಾಸತ್ತಾತ್ಮಕ ಪ್ರವೇಶದ ಬಗ್ಗೆ ಉತ್ಸುಕರಾಗಿದ್ದಾರೆ. ವಾಣಿಜ್ಯೋದ್ಯಮಿಯಾಗಿ, ವಿವಿಧ ವ್ಯವಹಾರಗಳು, ಲಾಭರಹಿತ ಸಂಸ್ಥೆಗಳೊಂದಿಗೆ ಕೆಲಸ ಮಾಡುವ ಇವರ ಅನುಭವವು ಅವರ ಒಳನೋಟಗಳಲ್ಲಿ, ದಿಟ್ಟ ಕಾರ್ಯಸೂಚಿಯಲ್ಲಿ ಹೊಳೆಯುತ್ತದೆ. ಶ್ರೀರಾಮ್ ಪ್ರಸ್ತುತ ಚೇರ್ಮನ್ ಮತ್ತು ಮ್ಯಾನೇಜಿಂಗ್ ಟ್ರಸ್ಟಿಯಾಗಿದ್ದಾರೆ. ನಾಯಕತ್ವ ತಂಡಕ್ಕೆ ಮಾರ್ಗದರ್ಶನ ನೀಡುತ್ತಾರೆ.

# ಇಲ್ಲಸ್ಟ್ರೇಷನ್ ಕೃಪೆ

ಈ ವಾರ್ಷಿಕ ವರದಿಯಲ್ಲಿನ ಇಲ್ಲಸ್ಟ್ರೇಷನ್‌ಗಳನ್ನು ಪ್ರಥಮ್ ಬುಕ್ಸ್‌ನ ಈ ಕೆಳಗಿನ ಶೀರ್ಷಿಕೆಗಳಿಂದ ತೆಗೆದುಕೊಳ್ಳಲಾಗಿದೆ:

| ಶೀರ್ಷಿಕೆ | ಚಿತ್ರಕಾರರು | ಲೇಖಕರು |
|---|---|---|
| ಚೆಂದುಳ್ಳಿ ಚತುರೆ ಚೀಕೂ | ಲವ್ಲೀನ್ ಮಿಶ್ರಾ | ಮಾನಸಿ ಪಾರೀಖ್ |
| ನಾನು ಬೈಕ್ ಓಡಿಸಬೇಕು | ರೈ | ಆರತಿ ಪಾರ್ಥಸಾರಥಿ |
| ಬಿ ಆರ್ ಅಂಬೇಡ್ಕರ್: ಪುಸ್ತಕದೊಳಗೊಂದು ಉಜ್ವಲ ಬದುಕು | ನಿಧಿನ್ ಶೋಭನಾ | ಯೋಗೇಶ್ ಮೈತ್ರೇಯ |
| ಕತ್ತಲ ಹ್ಯಾಂಗ ಸದ್ದು ಮಾಡ್ತೈತಿ? | ಕೃಷ್ಣ ಬಾಲ ಶೆಣೈ | ಅಪರ್ಣಾ ಕಪೂರ್ |
| ಪುಚ್ಕುವಿಗೊಂದು ಸಾಹಸ | ರಾಜೀವ್ ಐಪ್ | ದೀಪಾಂಜನಾ ಪಾಲ್ |
| ಗ್ರೇಸ್: ವೈಜ್ಞಾನಿಕ ಶಿಕ್ಷಣ ಎಲ್ಲರಿಗೂ ಸಿಗುವಂತಾಗಲು ಒಬ್ಬ ಎಂಜಿನಿಯರ್ ಹೋರಾಟ | ಪ್ರಿಯಾ ದಾಲಿ | ಸಾಯಂತನ್ ದತ್ತಾ |
| ಗೋಲ್! | ಅಲಫಿಯಾ ಹಸನ್, ಪೈರೊ | ನೇಹಾ ಸಿಂಗ್, ಸಬಾ ಖಾನ್ |
| ಡಿಟೆಕ್ಟಿವ್ ದಮಯಂತಿ | ನಿವೇದಿತಾ ಸುಬ್ರಮಣಿಯನ್ | ನಿವೇದಿತಾ ಸುಬ್ರಮಣಿಯನ್ |
| ಪುಚ್ಕುವಿಗೊಂದು ಬುಕ್ಕು | ರಾಜೀವ್ ಐಪ್ | ದೀಪಾಂಜನಾ ಪಾಲ್ |
| ನನ್ನ ಒಳ್ಳೆಯ ಗೆಳೆಯರು | ವೃಷಭ್ ಬನಶ್ಕಾರ್ | ರಮಾ ಹರ್ಡೀಕರ್-ಸಖದೇವ್ |
| ಮ್ಯೂಸಿಯಂನಲ್ಲೊಂದು ದಿನ | ಅನ್ವರ್ ಚಿತ್ರಕಾರ್ | ಅನು ಚೌಧರಿ-ಸೊರಾಬ್ಜೀ |
| ನಾನು ಮತ್ತು ಆಪೋ | ಕನಾಟೊ ಜಿಮೊ | ಕನಾಟೊ ಜಿಮೊ |
| ಬಾಹ್ಯಾಕಾಶದಲ್ಲೊಂದು ಹಾಡು | ಶುಭಶ್ರೀ ಮಾಥುರ್ | ನೇಹಾ ಸಿಂಗ್ |
| ಬಾರೋ ವಸಂತ | ಗಜಲ್ ಖಾದ್ರಿ | ಗಜಲ್ ಖಾದ್ರಿ |



**PRATHAM BOOKS**

#621, 2nd floor, 5th Main, OMBR Layout,
Banaswadi, Bengaluru 560043
T: +91 80 42052574 / 41159009
New Delhi | T: +91 11 41042483

www.prathambooks.org
www.storyweaver.org.in
www.donateabook.org.in